# ಸಣ್ಣಪಾತ್ರಗಳ ದೊಡ್ಡ ಕೊಡುಗೆ

ರಾಮಾಯಣದಲ್ಲಿ ಎಲ್ಲೋ ಒಂದೆರಡು ಕಡೆ ಮುಖ ತೋರಿಸಿ ಕಣ್ಮರೆಯಾಗುವ ಸಣ್ಣ ಪಾತ್ರಗಳು ಹಲವುಂಟು. ಅವು ಸಣ್ಣ ಪಾತ್ರಗಳಾದರೂ ಒಟ್ಟಂದದಲ್ಲಿ ಇಡಿಯ ರಾಮಾಯಣದ ಬೆಳವಣಿಗೆಯ ದೃಷ್ಟಿಯಲ್ಲಿ ತುಂಬ ಮಹತ್ತ್ವವನ್ನು ಪಡೆಯುತ್ತವೆ. ರಾಮಚರಿತೆಯ ಬಿತ್ತರದಲ್ಲಿ ಆ ಚಿಕ್ಕಪಾತ್ರಗಳ ಕೊಡುಗೆ ದೊಡ್ಡದು. ಅಂಥ ಕೆಲವು ಪಾತ್ರಗಳ ಅಂತಃಪ್ರವೇಶಕ್ಕಾಗಿ ಈ ಲೇಖನ.

## ಕ್ರೌಂಚಪಕ್ಷಿ ಮತ್ತು ಬೇಟೆಗಾರ

ರಾಮಾಯಣ ಪ್ರಾರಂಭವಾಗುವುದೇ ಕ್ರೌಂಚಪಕ್ಷಿಯ ಸಾವಿನಿಂದ. ಪ್ರಾಯಃ ಅದು ಸಾಯದೆ ಇರುತ್ತಿದ್ದರೆ ಮಹರ್ಷಿ ವಾಲ್ಮೀಕಿ ರಾಮಾಯಣವನ್ನೇ ರಚಿಸುತ್ತಿರಲಿಲ್ಲವೇನೋ ಎನ್ನುವಷ್ಟು ಗಾಢವಾಗಿ ಆ ಹಕ್ಕಿ ನಮ್ಮನ್ನು ಆವರಿಸಿ ಬಿಡುತ್ತದೆ.

ಪ್ರಸಂಗ ಹೀಗಿದೆ : ಒಮ್ಮೆ ವಾಲ್ಮೀಕಿ ಮುನಿಗಳು ಮಿಾಯಲೆಂದು ತಮಸೆಯ ತಡಿಗೆ ಬರುತ್ತಾರೆ. ಅಲ್ಲಿ ಚಿಲಿಪಿಲಿಗುಟ್ಟುತ್ತ ಹಾಯಾಗಿ ಮುದ್ದಾಡುತ್ತಿರುವ ಕ್ರೌಂಚಪಕ್ಷಿಗಳ ಜೋಡಿಯನ್ನು ನೋಡುತ್ತಾರೆ. ಅಷ್ಟರಲ್ಲಿ ಒಬ್ಬ ಬೇಟೆಗಾರ ಆ ಜೋಡಿಯಲ್ಲಿ ಒಂದನ್ನು - ಗಂಡುಹಕ್ಕಿಯನ್ನು - ಬಾಣ ಹೊಡೆದು ಉರುಳಿಸಿ ಬಿಡುತ್ತಾನೆ.

ಇದನ್ನು ಕಣ್ಣಾರೆ ಕಂಡ ಮುನಿಗಳ ಮನಸ್ಸು ಅಂತರ್ಮುಖವಾಯಿತು. ಬೇಡ ಕಣ್ಮರೆಯಾದ. ರಾಮ ಅವರ ಕಣ್ಮುಂದೆ ನಿಂತ. ಹಕ್ಕಿ ಕಣ್ಮರೆಯಾಯಿತು. ಕಾಮಮೋಹಿತನಾಗಿ ರಾಮಬಾಣದಿಂದ ಹತನಾದ ರಾವಣ ಅವರ ಕಣ್ಮುಂದೆ ನಿಂತ!

ಎಲ್ಲಿಂದ ಎಲ್ಲಿಗೆ? ತನ್ನ ಹೊಟ್ಟೆ ಪಾಡಿಗಾಗಿ ಅಮಾಯಕ ಹಕ್ಕಿಗಳನ್ನು ಕೊಲ್ಲುವ ಕಟುಕ ಬೇಡನೆಲ್ಲಿ? ಲೋಕಕಂಟಕನಾದ ರಾವಣನನ್ನು ಕೊಂದ ಕರುಣಾಳು ರಾಮನೆಲ್ಲಿ? ಒಲಿದು ಬಂದ ಹಕ್ಕಿಯೊಡನೆ ಲಲ್ಲೆಯಾಡುವ ಆ ಮುಗ್ಧ ಹಕ್ಕಿಯೆಲ್ಲಿ? ಧೂರ್ತ ಲಂಪಟ ರಾವಣನೆಲ್ಲಿ?

ಆದರೆ ನೆನಪುಗಳಿಗೆ ವಿವೇಕವಿಲ್ಲ. ಯಾವುದನ್ನೋ ಕಂಡಾಗ ಏನೇನೋ ನೆನಪಾಗಿ ಕಾಡುತ್ತದೆ. ಒಳ್ಳೆಯದನ್ನು ಕಂಡಾಗ ಕೆಟ್ಟದ್ದು ನೆನಪಾಗುತ್ತದೆ; ಕೆಟ್ಟದ್ದನ್ನು ಕಂಡಾಗ ಒಳ್ಳೆಯದು ನೆನಪಾಗುತ್ತದೆ. ಆದರೂ ಎಲ್ಲವೂ ಒಳ್ಳೆಯದಕ್ಕಾಗಿಯೆ ಆಗುತ್ತದೆ.

ಈ ದೃಶ್ಯವನ್ನು ಕಂಡು ಮುನಿಗಳ ಮನಸ್ಸು ಕರಗದೆ ಇರುತ್ತಿದ್ದರೆ, ಈ ದೃಶ್ಯ ನೆಪವಾಗಿ ರಾಮನ ನೆನಪಾಗದೆ ಇರುತ್ತಿದ್ದರೆ ರಾಮಾಯಣದ ರಸಪಾಕ ಹೇಗೆ ರೂಪುಗೊಳ್ಳುತಿತ್ತು?

ಈ ನೆನಪುಗಳದ್ದೇ ಒಂದು ಕತೆ. ಅದು ಬಿಚ್ಚಿಕೊಳ್ಳುವ ಬಗೆಯೆ ವಿಚಿತ್ರ. ಈ ಹಕ್ಕಿಗಳ ಮುಗ್ಧ ಪ್ರಣಯವನ್ನು ಕಂಡಾಗ ವಾಲ್ಮೀಕಿಮುನಿಗಳಿಗೆ ಮೊದಲು ನೆನಪಾದದ್ದು ಸೀತಾ-ರಾಮರ ಮಧುರ



ದಾಂಪತ್ಯ. ಬೇಡನನ್ನು ಕಂಡಾಗ ಮೊದಲು ನೆನಪಾದದ್ದು ಸೀತಾರಾಮರನ್ನು ಅಗಲಿಸ ಹೊರಟ ರಾವಣನ ಸ್ವಾರ್ಥಪೂರಿತ ದೌಷ್ಟ್ಯ.

ಒಂದು ಕ್ಷಣದಲ್ಲಿ ಚಿತ್ರ ಬದಲಾಯಿತು. ಬೇಡನ ಗುರಿ ತಪ್ಪಿಹಕ್ಕಿ ಸಾಯದೆ ಇರುತ್ತಿದ್ದರೆ, ಗುರಿ ತಪ್ಪಿಸಿ ಹಕ್ಕಿ ಹಾರಿ ಹೋಗಿದ್ದರೆ ನೆನಪಿನ ಚಿತ್ರ ಅಲ್ಲಿಗೇ ನಿಂತು ಬಿಡುತ್ತಿತ್ತು. ಹಾಗಾಗಲಿಲ್ಲ, ಬೇಡ ಗುರಿಯಿಟ್ಟು ಹೊಡೆದ, ಗಂಡುಹಕ್ಕಿ ಕೆಳಗುರುಳಿತು. ರಕ್ತದ ಮಡುವಿನಲ್ಲಿ ವಿಲಿವಿಲಿ ಒದ್ದಾಡಿ ಜೀವ ತೊರೆಯಿತು.

ಮುನಿಗಳ ಚಿತ್ತದಲ್ಲಿ ಮೂಡಿದ ಚಿತ್ರವೂ ಬದಲಾಯಿತು. ಒಡನೆ ಸೀತಾರಾಮರ ಬದಲು ಆ ಎಣೆವಕ್ಕಿಗಳು ರಾವಣ - ಮಂಡೋದರಿಯರಂತೆ ಕಂಡವು. ಗಂಡುಹಕ್ಕಿ ಉರುಳಿಬಿತ್ತು; ರಾವಣ ಉರುಳಿಬಿದ್ದಂತೆ. ಆದರೆ ಸಾಧ್ವಿ ಮಂಡೋದರಿಯಂತೆ ಅಮಾಯಕವಾದ ಹೆಣ್ಣಿಗೆ ಏಕಿಂಥ ಶಿಕ್ಷೆ? ಗಂಡು ತಪ್ಪು ಮಾಡುತ್ತಾನೆ. ಹೆಣ್ಣು ಶಿಕ್ಷೆ ಅನುಭವಿಸುತ್ತಾಳೆ. ಇದನ್ನು ಜಗತ್ತಿಗೆ ಸಾರಬೇಕು. ಅದಕ್ಕಾಗಿ ತಾನು ರಾಮಾಯಣವನ್ನು ರಚಿಸಬೇಕು.

ಇದಕ್ಕೆ ವಿಪರೀತವಾಗಿ ನಡೆಯುವುದೂ ಉಂಟು. ಹೆಣ್ಣು ತಪ್ಪು ಮಾಡುತ್ತಾಳೆ. ಗಂಡು ಶಿಕ್ಷೆ ಅನುಭವಿಸುತ್ತಾನೆ. ಕೈಕೇಯಿ - ದಶರಥರು ಇದಕ್ಕೆ ಸಾಕ್ಷಿ. ಹೀಗೆ ಇಡಿಯ ರಾಮಾಯಣ ಮುನಿಗಳ ಮನದಲ್ಲಿ ತುಂಬಿಕೊಂಡಿತು. ಒಳಗೆ ತುಂಬಿದ್ದನ್ನು ಹೊರಗೆ ಚೆಲ್ಲಲೇಬೇಕು. ಇದೊಂದು ಪ್ರಸವವೇದನೆ.

ವಾಲ್ಮೀಕಿ ಮುನಿಗಳೂ ಮೊದಲು ಬೇಟೆಗಾರರಾಗಿದ್ದರು ಎಂಬೊಂದು ಕಥೆಯುಂಟು. ಇದು ಹೌದಾದರೆ, ಅವರಿಗೆ ಮೊದಲು ನೆನಪಾದದ್ದು ಅವರ ಪೂರ್ವಜೀವನವೆ. ತಾನೂ ಹಿಂದೆ ಹೀಗೆಯೆ ಬದುಕಿದ್ದೆನಲ್ಲವೆ? ಆಗ ಸಹಜವಾಗಿದ್ದದ್ದು ಈಗ ಅಸಹ್ಯವೆನ್ನಿಸುತ್ತಿದೆ. ಇವನು ಇನ್ನೂ ಅದೇ ದಾರಿಯಲ್ಲಿ ಸಾಗುತ್ತಿದ್ದಾನೆ! ಎಂಥ ನಿರ್ದಯವಾದ ಮನಸ್ಸು! ಎಂಥ ಪಾಪಿಷ್ಠ ಜೀವನ!

ಅಷ್ಟರಲ್ಲೆ ಅವರ ಒಳಮನಸ್ಸು ಅಧ್ಯಾತ್ಮದಲ್ಲಿ ಮುಳುಗಿ ಬೇರೆಯೆ ಒಂದು ಚಿತ್ರವನ್ನು ಬಿಡಸತೊಡಗಿದೆ. ರಾವಣನನ್ನು ಕೊಂದ ರಾಮನೊಡನೆ ಆ ಬೇಟೆಗಾರನನ್ನು ಸಮೀಕರಿಸತೊಡಗಿದೆ.

ಪಾಪ! ಆ ಬೇಡನದಾದರೂ ಏನು ತಪ್ಪು. ಅವನೊಳಗಿದ್ದ ಭಗವಂತನೆ ಈ ಹಕ್ಕಿಯನ್ನು ಕೊಂದ. ತನ್ನೊಳಗೆ ತುಂಬಿ ರಾಮಾಯಣದ ರಚನೆಯ ಸನ್ನಾಹಕ್ಕೆ ತೊಡಗಿದ್ದಾನೆ. ಬೇಡನೊಬ್ಬ ಪಾತ್ರಧಾರಿ. ತಾನೂ ಒಬ್ಬ ಪಾತ್ರಧಾರಿ. ಅವನೊಬ್ಬನೆ ಸೂತ್ರಧಾರ!

ಜಗತ್ತಿನಲ್ಲಿ ಅಂತತಃ ಕೆಟ್ಟದ್ದೆಂಬುದೇ ಇಲ್ಲ. ಪ್ರತಿಯೊಂದು ಕೆಟ್ಟದ್ದೂ ಯಾವುದೋ ಒಳಿತಿಗಾಗಿಯೆ ಘಟಿಸುತ್ತದೆ. ರಾಮ ರಾವಣನನ್ನು ಕೊಂದದ್ದರಿಂದ ಮಂಡೋದರಿಗೆ ದುಃಖವಾಯಿತು. ಲೋಕಕ್ಕೆ ಕಲ್ಯಾಣವಾಯಿತು. ಬೇಡ ಈ ಹಕ್ಕಿಯನ್ನು ಕೊಂದದ್ದರಿಂದ ಆ ಹೆಣ್ಣು ಹಕ್ಕಿಗೆ ನೋವಾಯಿತು. ಲೋಕವೆಲ್ಲ ನಲಿದಾಡುವ ರಾಮಾಯಣಕ್ಕೆ ನಾಂದಿಯಾಯಿತು.

ರಾಮಾಯಣವನ್ನು ಜಗತ್ತಿಗೆ ನೀಡಿದವರು ವಾಲ್ಮೀಕಿ ಮುನಿಗಳಾದರೂ ಅವರ ಅಂತರಾಳದಲ್ಲಿ ಅದಮ್ಯವಾದ ಈ ಕಾವ್ಯ ಸ್ಫೂರ್ತಿಯನ್ನು ಚಿಮ್ಮಿಸಿದವರು ಈ ಬೇಡ ಮತ್ತು ಈ ಹಕ್ಕಿ.

ಕ್ರೌಂಚಪಕ್ಷಿ ತಾನು ಸತ್ತು ರಾಮಾಯಣವಾಗಿ ಹುಟ್ಟಿಬಂತು. ಬೇಡ ಈ ಹುಟ್ಟಿಗೆ ಬೀಜಕ್ಷೇಪ ಮಾಡಿದ. ದುರಂತದ ಮೊಟ್ಟೆಯೊಳಗೆ ಲೋಕಕಲ್ಯಾಣದ ಬೀಜವೊಂದು ಬೆಳೆಯುತ್ತಿರುತ್ತದೆ. ಸಾವು ಹುಟ್ಟಿನ ಪೂರ್ವರಂಗ.

ನಾವು ಈ ಹಕ್ಕಿಗೆ ಮತ್ತು ಈ ಬೇಡನಿಗೆ ಎಷ್ಟು ಕೃತಜ್ಞರಾಗಿರಬೇಕು; ವಾಲ್ಮೀಕಿ ಮುನಿಗಳಿಂದ ರಾಮಾಯಣದಂಥ ಚಂದದ ಆದಿಕಾವ್ಯ ಮೂಡಿ ಬರುವಂತೆ ಮಾಡಿದ್ದಕ್ಕಾಗಿ.

## ಮಂಥರೆಯ ಮತ್ಸರ ಮತ್ತು ಮುತ್ತಿನ ಸರ!

ರಾಮಾಯಣದ ಇನ್ನೊಂದು ಸಣ್ಣ ಪಾತ್ರ ಮಂಥರೆ.

ಇತಿಹಾಸದಲ್ಲಿ ಯಾವಾಗಲೂ ಹೀಗೆಯೆ : ಸಣ್ಣ ವ್ಯಕ್ತಿಗಳ ಸಣ್ಣತನದಿಂದಲೆ ದೊಡ್ಡ ಘಟನೆಗಳು ಸಂಭವಿಸುತ್ತವೆ. ಉದ್ಗಮಸ್ಥಾನದಲ್ಲಿ ಹನಿಯಾಗಿ ತೊಟ್ಟಿಕ್ಕಿದ ನೀರು ಮುಂದೆ ಹುಚ್ಚು ಹೊಳೆಯಾಗಿ ಹರಿಯುತ್ತದೆ. ಹಲವರು ಸಣ್ಣವರಿರುವುದರಿಂದಲೆ ಕೆಲವರು ದೊಡ್ಡವರಾಗುತ್ತಾರೆ. ಇದಕ್ಕೆ ಮಂಥರೆ ಒಂದು ಒಳ್ಳೆಯ ಉದಾಹರಣೆ.

ಮಂಥರೆ ಹೊರನಾಡಿನವಳು; ಕೇಕಯ ದೇಶದವಳು. ಕೈಕೇಯಿಯನ್ನು ಬಾಲ್ಯದಿಂದ ಬಲ್ಲವಳು. ಅವಳನ್ನು ದಾದಿಯಾಗಿ ಸಾಕಿ ಬೆಳೆಸಿದವಳು. ಕೈಕೇಯಿಗೆ ಮದುವೆಯಾದಾಗ ದಾಸಿಯಾಗಿ ಅವಳ ಜತೆಗೆಯೆ ಅಯೋಧ್ಯೆಗೆ ಬಂದವಳು.

ಅವಳ ಮಮತೆಯೆಲ್ಲ ತಾನು ಹುಟ್ಟಿದ ಊರು, ತಾನು ಖಾಯಮ್ಮಾಗಿ ಬಿಟ್ಟು ಬಂದ ಊರು ಕೇಕಯದ ಬಗೆಗೆ; ತಾನು ಸಾಕಿ ಬೆಳೆಸಿದ ಕೈಕೇಯಿಯ ಬಗೆಗೆ ಮತ್ತು ಕೈಕೇಯಿಯ ಮಗ ಭರತನ ಬಗೆಗೆ. ಅಯೋಧ್ಯೆ ಎಂದೂ ಅವಳದಾಗಲೇ ಇಲ್ಲ; ಅಯೋಧ್ಯೆಯ ಮಂದಿ ಕೂಡ. ಹುಟ್ಟೂರಿನ ಮಮತೆ ಸಹಜವಲ್ಲವೆ? ದೂರ ಸರಿದಷ್ಟು ಹುಟ್ಟೂರಿನ ಸೆಳೆತವೂ ಹೆಚ್ಚು.

ಒಬ್ಬ ಸಾಮಾನ್ಯ ಹೆಣ್ಣು ಇದಕ್ಕಿಂತ ಹೆಚ್ಚು ಎತ್ತರಕ್ಕೇರುವುದು ಸಾಧ್ಯವಿಲ್ಲ. 'ಸ್ವದೇಶೋ ಭುವನತ್ರಯಂ' ಎಂದು ಭಾವಿಸುವುದು ಅವಳಿಂದಾಗಲೇ ಇಲ್ಲ ಎಂದರೆ ಅದು ಅವಳ ತಪ್ಪಲ್ಲ. ಆದರೂ ಮಂಥರೆಯನ್ನು ಎಲ್ಲರೂ ತೆಗಳುವರೆ. ಅವಳನ್ನು ಹೊಗಳಬೇಕೆಂದೇನೂ ನಾನು ಹೇಳುತ್ತಿಲ್ಲ. ಅವಳು ಮಾಡಿದ ಕೆಲಸ ತೆಗಳುವಂಥದೇ. ಆದರೆ, ಗೊತ್ತಿದ್ದೋ ಗೊತ್ತಿಲ್ಲದೆಯೋ ಅವಳು ಮಾಡಿದ ಉಪಕಾರ ಏನು ಕಮ್ಮಿಯೆ? ಅವಳು ನಿಜಕ್ಕೂ ಮಂಥರೆ. ರಾಮಾಯಣದ ಕೆನೆಮೊಸರಲ್ಲಿ ಹುದುಗಿರುವ ಬೆಣ್ಣೆಯನ್ನು ಕಡೆದು ತೆಗೆಯಲು ಕಡೆಗೋಲು ಕೊಟ್ಟವಳು!

ಮಂಥರೆ ಇಲ್ಲದಿದ್ದರೆ ರಾಮಾಯಣ ಉಂಟೆ? ಸೀತಾ-ರಾಮರು ಮದುವೆಯಾಗಿ, ಸುಖವಾಗಿ ಅಯೋಧ್ಯೆಯನ್ನಾಳಿದರು ಎಂಬಲ್ಲಿಗೇ ರಾಮಾಯಣ ಮುಗಿದು ಹೋಗುತ್ತಿತ್ತು.



ಬಾಲಕಾಂಡಕ್ಕೇ ರಾಮಾಯಣದ ಕೊನೆಯಾಗುತ್ತಿತ್ತು. ಮುಂದಿನ ಕಾಂಡಗಳು ಮುಂದುವರಿಯಲು ಕಾರಣ ಮಂಥರೆಯೇ.

ರಾಮಚಂದ್ರ ಕಾಡಿಗೆ ಹೋದದ್ದು, ಖರನನ್ನು ಮತ್ತು ಅವನ ಹದಿನಾಕು ಸಾವಿರ ರಕ್ಕಸರ ಪಡೆಯನ್ನು ಕೊಂದದ್ದು, ಸೀತೆಯನ್ನು ಕಳಕೊಂಡದ್ದು, ಸುಗ್ರೀವನನ್ನು ಕಂಡದ್ದು, ಹನುಮಂತ ಲಂಕೆಗೆ ಹಾರಿದ್ದು, ರಾಮ ಲಂಕೆಗೆ ತೆರಳಿ ರಾವಣನನ್ನು ಕೊಂದದ್ದು - ಈ ಎಲ್ಲ ಬೆಳವಣಿಗೆಗಳಿಗೂ ಮೂಲ ಮಂಥರೆಯ ಪಿತೂರಿಯೆ ಅಲ್ಲವೆ? ಇಡಿಯ ರಾಮಾಯಣದ ಸಾರ್ಥಕ್ಯ ಇರುವುದು ಮಂಥರೆಯ ತರಳೆಯಲ್ಲಿ!

ಭಗವಂತನ ಅವತಾರದ ಮಹಿಮೆಯ ಬಿತ್ತರಕ್ಕೆ ಕಾರಣಳಾದ ಈ ಕೆಟ್ಟ ಹೆಂಗಸನ್ನು ನಾವು ಮರೆಯುವುದಾದರೂ ಹೇಗೆ? ಅವಳ ಕೆಟ್ಟತನದಿಂದಲೇ ರಾಮನ ಒಳ್ಳೆಯತನ ವ್ಯಕ್ತವಾಯಿತು. ರೋಗಿಯೇ ಇಲ್ಲದ ನಾಡಿನಲ್ಲಿ ವೈದ್ಯರ ಕೈಗುಣ ಹೇಗೆ ತಿಳಿಯಬೇಕು? ಎಂಥ ದೊಡ್ಡ ಕೊಡುಗೆ ಮಂಥರೆಯದು!

ಇದಕ್ಕೆ ಬೀಜಕ್ಷೇಪ ಮೊದಲೇ ಆಗಿಬಿಟ್ಟಿದೆ; ರಾಮಚಂದ್ರ ಹುಟ್ಟಮಗುವಾಗಿದ್ದಾಗಲೇ ಮುದ್ದಾದ ಮಗುವನ್ನು ಎಲ್ಲರೂ ಇಷ್ಟಪಡುತ್ತಾರೆ. ಎಂಥದೇ ಆದರೂ ಮಂಥರೆಯದೂ ಹೆಣ್ಣು ಹೃದಯವಲ್ಲವೆ? ಅವಳೂ ಪುಟ್ಟ ಮಗು ರಾಮಚಂದ್ರನನ್ನು ಕಂಡು ಮೆಚ್ಚಿದಳು; ಎತ್ತಿ ಮುದ್ದಾಡ ಬಯಸಿದಳು. 'ಬಾ ಮಗೂ' ಎಂದು ಕೈ ಚಾಚಿದಳು. ಈ ಲೀಲಾ ನಾಟಕ ಸೂತ್ರಧಾರಿ ಆಗಲೇ ಮುಂದಿನ ನಾಟಕಕ್ಕೆ ನಾಂದಿ ಹಾಕಿದ! 'ನಾನು ಬರೊಲ್ಲ' ಎಂದ. ಮಂಥರೆ ಬಿಡಲಿಲ್ಲ. ಬಲವಂತವಾಗಿ ಮಗುವನ್ನೆತ್ತಿಕೊಂಡಳು. ರಾಮ ಸುಮ್ಮನಿರಲಿಲ್ಲ. ಆಕೆಯನ್ನು ಕಾಲಿನಿಂದ ಒದ್ದು ರಂಪ ಮಾಡಿ ಕೆಳಗಿಳಿದು ಬಿಟ್ಟ.

ಮಕ್ಕಳು ಜಗಳ ಆಡುತ್ತಾರೆ. ದೊಡ್ಡವರು ಜಗಳ ಮಾಡುತ್ತಾರೆ. ಮಕ್ಕಳು ಜಗಳ ಮರೆತು ಮತ್ತೆ ಒಂದಾಗುತ್ತಾರೆ. ದೊಡ್ಡವರು ಮರೆಯದೆ ದ್ವೇಷ ಬೆಳೆಸುತ್ತಾರೆ; ಬೆಳಸಿ ಶಾಶ್ವತವಾಗಿ ಬೇರೆಯಾಗುತ್ತಾರೆ. ಮಕ್ಕಳು ತಮ್ಮ ಈ ಗುಣದಿಂದ ದೊಡ್ಡವರಾಗುತ್ತಾರೆ; ದೊಡ್ಡವರು ಸಣ್ಣವರಾಗುತ್ತಾರೆ. ಇಲ್ಲೂ ಹಾಗೆಯೆ ಆಯಿತು. ರಾಮಚಂದ್ರರ ಒದೆಯಾಟವನ್ನು ಮಂಥರೆ ಮರೆಯಲೇ ಇಲ್ಲ. ಅದು ಅವಳಲ್ಲಿ ಹಗೆಯಾಗಿ ಹೊಗೆಯಾಡಿತು. 'ಈ ಹುಡುಗನಿಗೆ ಬುದ್ಧಿ ಕಲಿಸದೆ ಇದ್ದರೆ ತಾನು ಕೇಕಯದ ಮಂಥರೆಯೇ ಅಲ್ಲ' ಎಂದು ಅವಳು ತೀರ್ಮಾನಿಸಿದಳು. ರಾಮಚಂದ್ರನ ಪಟ್ಟಾಭಿಷೇಕದ ಪ್ರಸ್ತಾಪ ಬಂದಾಗ ಈ ಹಗೆಯ ಹೊಗೆ ಬೆಂಕಿಯಾಗಿ ಭುಗಿಲೆದ್ದಿತು. ಅವಳು ಕೈಕೇಯಿಯ ಕಿವಿ ಚುಚ್ಚಿದಳು. ರಾಮ ಕಾಡಿಗೆ ತೆರಳಿದಾಗ ಅವಳ ಮನಸ್ಸು ಹಗುರಾಯಿತು; ತಾನು ಗೆದ್ದೆ ಎಂದು ನಲಿಯಿತು.

ರಾಮಚಂದ್ರ ಕಾಡಿಗೆ ಬಂದ ಸುದ್ದಿ ತಿಳಿದಾಗ ಅತ್ತ ಋಷಿ ಮುನಿಗಳ ಮನಸ್ಸೂ ಹಗುರಾಯಿತು; ಖುಶಿಯಿಂದ ನಲಿಯಿತು. ಮಂಥರೆಯ ಕೆಟ್ಟತನದಿಂದ ಲೋಕಕ್ಕೆ ಕಲ್ಯಾಣವಾಯಿತು ಎಂದು ಸಂತಸಪಟ್ಟರು. ಇದು ಮಂಥರೆಯ ರಾಮಾಯಣ.

ಇನ್ನೂ ಹಿಂದಕ್ಕೆ ಹೋದರೆ ಈ ಮಹಾನಾಟಕಕ್ಕೆ ನಾಂದಿ ಹಾಡಿದವನು ಚತುರ್ಮುಖ. ಈ ಕಥೆಯ ಪ್ರಾರಂಭ ಹೀಗಾಯಿತು : ದೇವತೆಗಳು ಕಡಲು ಕಡೆದರು. ಕಡೆದಾಗ ಏನೇನೋ ಬಂತು. ಅಮೃತ ಬರುವ ಮೊದಲು ವಿಷ ಬಂತು; ಲಕ್ಷ್ಮಿಯ ಅಕ್ಕ ಅಲಕ್ಷ್ಮಿ ಬಂದಳು. ಇವಳನ್ನು ಜ್ಯೇಷ್ಠಾಲಕ್ಷ್ಮೀ ಎಂದು ಕರೆದರು. ಇವಳು ಕಲಿಯ ಮಡದಿಯಾದಳು. ಅನಂತರ ಲಕ್ಷ್ಮಿ ಬಂದಳು; ಅಮೃತ ಬಂತು. ಲಕ್ಷ್ಮಿ ನಾರಾಯಣನ ಮಡದಿಯಾದಳು; ಅಮೃತ ದೇವತೆಗಳ ಸೊತ್ತಾಯಿತು.

ಕಲಿಯ ಮಡದಿ ಅಲಕ್ಷ್ಮಿ ಅಲ್ಲಿಯೂ ಸುಮ್ಮನೆ ಕೂಡಲಿಲ್ಲ; ಪಿತೂರಿ ಮಾಡಿದಳು. ಅದು ಅವಳ ಹುಟ್ಟುಗುಣ. ತಾನು ಅಪ್ಸರೆಯಾಗಿ ದೇವತೆಗಳ ಜತೆ ಸೇರಬೇಕು; ತಾನೂ ಅಮರಳಾಗಬೇಕು ಎಂದು ಬಯಸಿ ತಪಸ್ಸು ಮಾಡಿದಳು. ವರ ಪಡೆದು 'ದುಂದುಭಿ' ಎಂಬ ಹೆಸರಿನ ಅಪ್ಸರೆಯಾದಳು. ಏನಿದ್ದರೂ ಇದು ಕಟ್ಟಿಕೊಂಡ ವೇಷ. ನಿಜ ಬಣ್ಣ ಬಯಲಾಗಲೇಬೇಕು. ಅದಕ್ಕಾಗಿ ಚತುರ್ಮುಖ ಅವಳನ್ನು ಕರೆದು ನುಡಿದ : 'ರಾಮಾವತಾರ ಕಾಲದಲ್ಲಿ ನೀನೂ ಭೂಮಿಯಲ್ಲಿ ಹುಟ್ಟು. ರಾಮನನ್ನು ಕಾಡಿಗೆ ಕಳಿಸುವ ಕೆಲಸ ನಿನ್ನಿಂದ ನಡೆಯಬೇಕು. ಅದರಿಂದ ನೀನು ನಿನ್ನ ನಿಜಗತಿಯನ್ನು ಹೊಂದುವೆ'

ದುಂದುಭಿಗೆ ಖುಶಿಯೋ ಖುಶಿ. ರಾಮನನ್ನು ರಾಜನಾಗದಂತೆ ಮಾಡಿ ಕಾಡಿಗಟ್ಟಿ ಬಿಟ್ಟರೆ ತನಗೆ ಸದ್ಗತಿ. ತಾನು ಗೆದ್ದು ಬಿಟ್ಟೆ.

ತಾನು ಹುಲಿಯಂತೆ ಕಾಣಬೇಕೆಂದು ಮೈಸುಟ್ಟುಕೊಂಡರೂ ನರಿ ನರಿಯೆ. ಅದೆಂದೂ ಹುಲಿಯಾಗದು. ಅದು ಊಳಿಡುತ್ತದೆ ಹೊರತು ಗರ್ಜಿಸದು. ಅಲಕ್ಷ್ಮಿ ಅಪ್ಸರೆಯಾದರೂ ಅವಳ ಅಸುರ ಸ್ವಭಾವ ಅಭಿವ್ಯಕ್ತಿಗಾಗಿ ಹಾದಿ ಕಾಯುತ್ತಿತ್ತು.

ದುಂದುಭಿಯಾದ ಅಲಕ್ಷ್ಮಿ ಮಂಥರೆಯಾಗಿ ಭೂಮಿಗೆ ಬಂದಳು. ರಾಮನ ರಾಜ್ಯಾಭಿಷೇಕವನ್ನು ತಡೆದಳು. ಇನ್ನು ತನ್ನ ಸದ್‌ಗತಿಯನ್ನು ಯಾರೂ ತಡೆಯಲಾರರು ಎಂದು ಬೀಗಿದಳು.

'ರಾಮನಿಗೆ ಪಟ್ಟಾಭಿಷೇಕವಂತೆ' ಎಂದು ಸುದ್ದಿ ಮುಟ್ಟಿಸಿದಾಗ ತನ್ನ ಕೊರಳ ಮುತ್ತಿನ ಸರವನ್ನೆ ಉಡುಗರೆಯಾಗಿ ಕೊಟ್ಟ ಕೈಕೇಯಿ ಅವಳಿಗೆ ಪೆದ್ದಿಯಾಗಿ ಕಂಡಳು. ಮುತ್ತಿನ ಸರವೂ ಅವಳಿಗೆ ಕಾಲ ಕಸವಾಯಿತು, ತನ್ನ ಸದ್‌ಗತಿಗೆ ಅಡ್ಡಿಯಾದ ಈ ಸಂಭಾವನೆ ಯಾರಿಗೆ ಬೇಕು?

ಆದರೆ ಚತುರ್ಮುಖನಾಡಿದ ನಾಟಕ ಅವಳಿಗೆ ತಿಳಿಯಲೇ ಇಲ್ಲ. ತಿಳಿದಾಗ ಕಾಲ ಮಿಂಚಿತ್ತು. ಬ್ರಹ್ಮ ಹೇಳಿದ್ದು ನಿಜವಾಯಿತು. ಅವಳಿಗೆ ನಿಜಗತಿ ದೊರಕಿತು. ಆದರೆ ಆ ನಿಜಗತಿ ಸದ್‌ಗತಿಯಾಗಿರಲಿಲ್ಲ; ದುರ್ಗತಿಯಾಗಿತ್ತು.

ಅವಳ ಕಿಚ್ಚಿನ ಕೃತ್ಯದಿಂದಾಗಿ ಲೋಕಕ್ಕೆ ಕಲ್ಯಾಣವಾದರೂ ಅವಳಿಗೆ ಕಲ್ಯಾಣವಾಗಲಿಲ್ಲ. ಅವಳು ಮರಳಿ ಅಪ್ಸರೆಯಾಗಲಿಲ್ಲ. ವರದಿಂದ ಬಂದ ಬಣ್ಣದ ವೇಷ ಮರೆಯಾಯಿತು. ನಿಜ ಬಣ್ಣ ಬಯಲಾಯಿತು. ಅವಳು ಅಲಕ್ಷ್ಮಿಯೆ ಆದಳು. ಭಗವಂತನನ್ನು ದ್ವೇಷಿಸಿದ್ದಕ್ಕಾಗಿ ತಮಸ್ಸಿಗೆ



ಸಂದಳು. ಅದೇ ಅವಳ ನಿಜಗತಿ ಅಲ್ಲವೆ?

ಬ್ರಹ್ಮನ ಕೋಪಕ್ಕೆ ಬಲಿಯಾದರೂ ವಾಲ್ಮೀಕಿ ಮುನಿಗಳು ಅವಳನ್ನು ಶಪಿಸುವಂತಿಲ್ಲ. ಅವರ ಕಾವ್ಯಕ್ಕೆ ವಿಪ್ರಲಂಭಶೃಂಗಾರದ ರಸಪುಷ್ಟಿ ತಂದವಳೇ ಅವಳಲ್ಲವೆ?

## ಅಹಲ್ಯೆ, ಗೌತಮ ಮತ್ತು ಇಂದ್ರ

ಅಹಲ್ಯೆ ಕೂಡ ಹಾಗೆಯೆ. ರಾಮಾಯಣದಲ್ಲಿ ಒಮ್ಮೆ ಮಾತ್ರ ಬಂದು ಮರೆಯಾಗುವ ಚಿಕ್ಕ ಪಾತ್ರ. ಶಾಪಗ್ರಸ್ತ ಮಹಿಳೆ.

ಆದರೆ ಅವಳ ಶಾಪವೆ ವರವಾಯಿತಲ್ಲವೆ? ಅವಳ ಮೇಲುನೋಟದ ಪತನದಲ್ಲೆ ಉತ್ಥಾನದ ಬೀಜ ಇತ್ತಲ್ಲವೆ? ಆ ಶಾಪದಿಂದಾಗಿಯೆ ಅವಳಿಗೆ ರಾಮಚಂದ್ರನ ಪಾದಸ್ಪರ್ಶವಾಯಿತು. ಅವಳು ಪ್ರಾತಃಸ್ಮರಣೀಯಳಾದಳು. ಜಾರಿದವರೆಲ್ಲ ಜಾರೆಯರಲ್ಲ; ಜಾರಿದರೂ ಮತ್ತೆ ಮೇಲೇರಬಹುದು ಎಂದು ತೋರಿಸಿಕೊಟ್ಟವಳು ಅಹಲ್ಯೆ.

ಅಹಲ್ಯೆಯನ್ನು ಸಮರ್ಥಿಸಲೆಂದು ಬಗೆಬಗೆಯ ಕಥೆ ಕಟ್ಟುವವರುಂಟು! ಅಹಲ್ಯೆಗೆ ಮಾರುವೇಷದಿಂದ ಬಂದ ದೇವೇಂದ್ರನ ಗುರುತು ಹತ್ತಲಿಲ್ಲ. ಬಂದದ್ದು ತನ್ನ ಗಂಡ ಗೌತಮನೆ ಎಂದು ಭಾವಿಸಿ ಆತನ ಜತೆ ರಮಿಸಿದಳು ಎಂದು ವಾದಿಸುವವರುಂಟು.

ವಾಲ್ಮೀಕಿ ಮುನಿಗಳು ಕಥೆಗೆ ಬಣ್ಣ ಕಟ್ಟಲಿಲ್ಲ. ಇದ್ದದ್ದನ್ನು ಇದ್ದ ಹಾಗೆ ದಾಖಲಿಸಿದರು.

ಕಥೆಯ ಒಟ್ಟು ಹಿನ್ನೆಲೆ ಹೀಗಿದೆ : ಮುದ್ಗಲನೆಂಬ ಮುನಿ ಮೂಲತಃ ಪಂಚಾಲದೇಶದ ರಾಜಕುಮಾರ. ಐವರು ಸೋದರರಲ್ಲಿ ಹಿರಿಯ. ಈ ಐವರು ಸೋದರರಿಂದಲೆ ಆ ದೇಶಕ್ಕೆ ಪಂಚಾಲದೇಶ ಎಂದು ಹೆಸರಾಯಿತು. ಮುದ್ಗಲ ಮುಂದೆ ಬ್ರಾಹ್ಮಣ ಧರ್ಮವನ್ನು ಸ್ವೀಕರಿಸಿದ; ಮೌದ್ಗಲ್ಯಗೋತ್ರದ ಮೂಲಪುರುಷನಾದ. ಇವನ ಮಗ ದಿವೋದಾಸ; ಮಗಳೆ ಅಹಲ್ಯೆ.

ಅಹಲ್ಯೆಯ ಮಗ ಶತಾನಂದ. ಗೌತಮ ಅಹಲ್ಯೆಯರ ಮಧುರ ದಾಂಪತ್ಯದ ಫಲವಾಗಿ ಹುಟ್ಟಿದ ಈ ಶತಾನಂದ ಮುನಿ ಮಿಥಿಲೆಯ ದೊರೆ ಜನಕನ ರಾಜಪುರೋಹಿತನಾಗಿ ಮಿಥಿಲೆಯಲ್ಲೆ ಉಳಿದ.

ಶತಾನಂದನ ಮಗ ಸತ್ಯಧೃತಿ. ಅವನ ಮಗ ಶರದ್ವಂತ. ಶರದ್ವಂತನ ರೇತಸ್ಸಿನ ಪುಟಪಾಕವೆ ಕೃಪ ಮತ್ತು ಕೃಪಿ.

ಅಹಲ್ಯೆಯ ಅಣ್ಣ ದಿವೋದಾಸನ ಸಂತತಿಯಲ್ಲೆ ಮುಂದೆ ದ್ರುಪದ ಹುಟ್ಟಿದ. ದ್ರುಪದನ ಕುಮಾರಿಯೆ ಪಂಚ ಪಾಂಡವರ ಕೈಹಿಡಿದ ಪಂಚಾಲಕನ್ಯೆ ದ್ರೌಪದಿ.

ಹೀಗೆ ಯುಗ - ಯುಗಗಳಲ್ಲಿ ಈ ತಾಪಸವಂಶ ಬೆಳೆದು ಬಂದಿದೆ; ಬೆಳೆದು ರಾಮಾಯಣ - ಮಹಾಭಾರತಗಳನ್ನು ಬೆಸೆದು ನಿಂತಿದೆ.

ರಾಮಾಯಣ ಕಾಲದಲ್ಲಿ ನಡೆದ, ವಾಲ್ಮೀಕಿ ಮುನಿಗಳು ದಾಖಲಿಸಿದ ಇತಿಹಾಸ ಹೀಗಿದೆ:

ಮಿಥಿಲೆಯ ಪಕ್ಕದ ತಪೋವನದಲ್ಲಿ, ಆಶ್ರಮವೊಂದರಲ್ಲಿ ಗೌತಮರು ತಪೋನಿರತರಾಗಿದ್ದರು. ಅಹಲ್ಯೆ ಬಾಳಸಂಗಾತಿಯಾಗಿ ಜತೆಗಿದ್ದಳು.

ಗೌತಮರು ಮನೆ - ಮಡದಿ ಎಲ್ಲವನ್ನೂ ಮರೆತು ಗಾಢವಾದ ತಪಸ್ಸಿನಲ್ಲಿ ಮುಳುಗಿದರು. ಅವರಿಗೆ ತಪಸ್ಸಿನ ಮೂಲಕ ಇನ್ನಷ್ಟು ಎತ್ತರಕ್ಕೆ ಏರುವ ಬಯಕೆ. ತನ್ನ ಅರ್ಹತೆಯನ್ನೂ ಮೀರಿ ಎತ್ತರಕ್ಕೇರುವ ಹವಣಿ.

ಅವರು ಎತ್ತರಕ್ಕೇರಿದರು; ತನ್ನ ಅರ್ಹತೆಯನ್ನು ಮೀರಿ ಎತ್ತರಕ್ಕೇರಿದರು. ಪ್ರಕೃತಿ ನಿಯಮದಲ್ಲಿ ಪ್ರತಿಯೊಬ್ಬನ ಸಾಧನೆಗೂ ಒಂದು ಮಾನದಂಡವುಂಟು. ಅದನ್ನು ಮೀರಿ ಸಾಗುವುದು ಸೃಷ್ಟಿಯ ನಿಯಮಕ್ಕೆ ವಿರುದ್ಧವಾದದ್ದು. ಅದನ್ನು ಭಗವಂತನು ಕ್ಷಮಿಸುವುದಿಲ್ಲ; ದೇವತೆಗಳೂ ಕ್ಷಮಿಸುವುದಿಲ್ಲ.

ಯಾರು ಎಷ್ಟು ಗಳಿಸಬೇಕೋ ಅಷ್ಟೇ ಅವರಿಗೆ ದಕ್ಕುವಂಥದು. ಹೆಚ್ಚಿನದು ಗಳಿಸಿದರೂ ಉಳಿಯುವುದಿಲ್ಲ. ಕರಗಿ ಹೋಗುತ್ತದೆ. ಗೌತಮರ ಈ ಮಿಗತೆ ಪುಣ್ಯವನ್ನು ಕರಗಿಸಬೇಕು. ಅದಕ್ಕೆ ವಿಧಿನಿಯತಿಯಂತೆ ಇಂದ್ರ ಒಂದು ತಂತ್ರ ಹೂಡಿದ.

ಗೌತಮರು ಆಶ್ರಮದಲ್ಲಿ ಇಲ್ಲದಿರುವ ಸಮಯ ನೋಡಿ ಇಂದ್ರ ಮೆಲ್ಲನೆ ಅತ್ತ ಬಂದ. ಗೌತಮರ ರೂಪ ತೊಟ್ಟು. ಬಂದವನೆ ಅಹಲ್ಯೆಯನ್ನು ಕರೆದ; 'ಬಾ ರಮಿಸೋಣ' ಎಂದ.

ಅಹಲ್ಯೆಯೂ ಸಾಮಾನ್ಯ ಹೆಣ್ಣಲ್ಲ. ಹಿರಿಯ ತಪಸ್ವಿನಿ. ಅವಳಿಗೆ ತಿಳಿದು ಹೋಯಿತು : ಬಂದಿರುವುದು ಗೌತಮರಲ್ಲ; ಗೌತಮರ ರೂಪ ತೊಟ್ಟು ಇಂದ್ರ ಬಂದಿದ್ದಾನೆ.

ಋಷಿ ಜೀವನದಲ್ಲಿ ಸವೆದ ಅಹಲ್ಯೆಯ ಬಗೆಯಲ್ಲಿ ಬಯಕೆ ಚಿಗುರೊಡೆಯಿತು. ದೇವೇಂದ್ರನೇ ಬಂದು ಕರೆದಾಗ ಏಕೆ ಬೇಡವೆನ್ನಬೇಕು? ದೇವತೆಗಳು ನಮ್ಮೊಳಗೆಯೆ ಇದ್ದು ನಮ್ಮ ಎಲ್ಲ ಭೋಗದಲ್ಲಿ ಪಾಲುದಾರರಲ್ಲವೆ? ಅದು ಮನುಷ್ಯ ಭೋಗದಂತೆ ಅಲ್ಲ. ಇಂದ್ರಿಯಾಭಿಮಾನಿಗಳ ಭೋಗ. ದೇವಲೋಕದ ಸುಖ ಎಂದರೇನು ಎಂದು ತಿಳಿಯಬಯಸಿದರೆ ತಪ್ಪೇನು?

ಅವಳ ಕುತೂಹಲ ಗರಿಗೆದರಿತು. ಒಂದು ಅಪೂರ್ವ ಅನುಭವವನ್ನು ಪಡೆಯುವ, ಅದೂ ತಾನಾಗಿ ಒದಗಿ ಬಂದ ಸದವಕಾಶವನ್ನು ಕಳೆದುಕೊಂಡು ಹೆಡ್ಡಿಯಾಗಬೇಡ ಎಂದು ಅವಳ ಒಳಬಗೆ ತಾಕೀತು ಮಾಡಿತು.

ಒಳಗಿನ ಬಯಕೆಯ ಒತ್ತಡಕ್ಕೆ ಅವಳು ಮಣಿದಳು. ಇದು ಪರಪುರುಷನ ಸಂಗ ಅಲ್ಲ; ನಮ್ಮೊಳಗೆಯೆ ಇರುವ ದೇವಭೋಗ ಎಂದುಕೊಂಡು ದೇವರಾಜನೊಡನೆ ಬೆರೆತಳು; ಬೆರೆತು ತಣಿದಳು; ತಣಿದು ಧನ್ಯತೆಯ ಭಾವ ತಳೆದಳು. ಆಹ! ಈ ತನಕ ಕಂಡರಿಯದ ಅನುಭವ. ದೇವಲೋಕವೆ ಭುವಿಗಿಳಿದು ಬಂದ ಅನುಭವ!

ಅವಳು ಇಂದ್ರನಿಗೆ ಕೃತಜ್ಞತೆಯನ್ನರ್ಪಿಸಿದಳು. ಮತ್ತೆ ವಿನಂತಿಸಿಕೊಂಡಳು: 'ಮಹರ್ಷಿಗಳು



ಬರುವ ಹೊತ್ತಾಯಿತು. ಋಷಿಗಳ ಕೋಪದಿಂದ ನನ್ನನ್ನು ಪಾರುಮಾಡು; ನೀನೂ ಪಾರಾಗು. ಬೇಗ ಇಲ್ಲಿಂದ ತೆರಳು. ನೀನಿತ್ತ ಸವಿಯ ಅನುಭವಕ್ಕಾಗಿ ಕೃತಜ್ಞತೆಗಳು!

ಇನ್ನೇನು ಇಂದ್ರ ತೆರಳಬೇಕು. ಅಷ್ಟರಲ್ಲಿ ಗೌತಮರು ಬಂದೇ ಬಿಟ್ಟರು. ಇಂದ್ರನಿಗೂ ಅದೇ ಬೇಕಾಗಿತ್ತು. ಅವನೂ ಹೋಗುವ ನಾಟಕ ಆಡಿದ. ಆದರೆ ಹೋಗಲಿಲ್ಲ. ಗೌತಮರ ಕಣ್ಣಿಗೆ ಇಂದ್ರ ಬಿದ್ದ. ಅವರ ಒಳ ಬಗೆಗೆ ವಿಷಯ ತಿಳಿದು ಇಂದ್ರನಿಗೆ ಶಾಪವಿತ್ತರು : 'ಬೀಜ ಕಿತ್ತ ಹೋರಿಯಂತೆ ನಿರ್ವೀರ್ಯನಾಗು. ನಿನ್ನ ಹೆಣ್ಮರುಳತನಕ್ಕೆ ಇದು ಶಿಕ್ಷೆ'

ಮತ್ತೆ ಅಹಲ್ಯೆಯತ್ತ ತಿರುಗಿ ನುಡಿದರು : 'ಜನರ ಕಣ್ಣಿಗೆ ಅದೃಶ್ಯಳಾಗಿ ಈ ಆಶ್ರಮದ ಶಿಲೆಯಲ್ಲಿ ಶಿಲೆಯಾಗಿ ಬಾಳು, ಮತ್ತೆ ರಾಮಚಂದ್ರನ ಪಾದಸ್ಪರ್ಶವಾದಾಗ ತಪದಿಂದ ಪರಿಶುದ್ಧಳಾಗಿ ಮೇಲೆದ್ದು ಬಾ'.

ಕೋಪದಿಂದ, ಶಾಪದಿಂದ ಮುನಿಗಳ ತಪಸ್ಸು ಕರಗಿತು. ಇಂದ್ರನ ಕೆಲಸ ಪೂರಯಿಸಿತು. ಇಂದ್ರ ಅಪರಾಧಿಯಂತೆ ತಲೆ ತಗ್ಗಿಸಿ ನಡೆದ. ಮುನಿಗಳು ತಪಸ್ಸಿಗೆಂದು ಕಾಡಿಗೆ ತೆರಳಿದರು. ಅಹಲ್ಯೆ ಒಬ್ಬಳೆ ಕಲ್ಲಿನಲ್ಲಿ ಕಲ್ಲಾಗಿ ಕಲ್ಲಿನಂತೆ ಬದುಕಿದಳು; ಯಾರ ಕಣ್ಣಿಗೂ ಬೀಳದೆ, ಮನಸ್ಸು ಕಲ್ಲು ಮಾಡಿಕೊಂಡು, ಭಗವಂತನನ್ನೆ ನೆನೆಯುತ್ತ!

ಅಹಲ್ಯೆ ಜಾರಿ ಎತ್ತರಕ್ಕೇರಿದಳು; ಗೌತಮರು ಎತ್ತರಕ್ಕೇರಿ ಜಾರಿದರು.

ಅವರನ್ನು ಜಾರಿಸಿದ, ಇವಳನ್ನು ಏರಿಸಿದ ಇಂದ್ರ ತಾನು ಜಾರದೆ, ಜಾರನಾಗದೆ ನಿರ್ಲಿಪ್ತನಾಗಿ ಉಳಿದ. ಇದು ದೇವಗುಹ್ಯ.

ಹಾಗಾದರೆ ಇಂದ್ರನಿಗೇಕೆ ಶಾಪದ ಶಿಕ್ಷೆ?

ಗೌತಮರು ಅರ್ಹತೆಗಿಂತ ಹೆಚ್ಚು ಸಾಧನೆ ಮಾಡಿದ್ದಕ್ಕಾಗಿ ಅವರಿಗೆ ಶಾಸ್ತಿಯಾಯಿತು. ಭೋಗಕ್ಕಾಗಿ ಮನಸ್ಸು ವಿಚಲಿತಗೊಂಡ ಅಹಲ್ಯೆಗೂ ಶಾಸ್ತಿಯಾಯಿತು. ಜತೆಗೆ ಈ ದಿವ್ಯನಾಟಕದಲ್ಲಿ ಪಾಲುಗೊಂಡದ್ದಕ್ಕಾಗಿ ಅವಳಿಗೆ ಉದ್ಧಾರದ ಬಾಗಿಲೂ ತೆರೆದುಕೊಂಡಿತು. ಅದಕೆಂದೆ ರಾಮಚಂದ್ರ ಅವಳನ್ನರಿಸಿಕೊಂಡು ಬಂದ. ಆದರೆ ದೇವಕಾರ್ಯವನ್ನೀಡೇರಿಸಿದ ಇಂದ್ರನಿಗೇಕೆ ಈ ಶಿಕ್ಷೆ?

ಈ ಶಾಪ, ಈ ಶಿಕ್ಷೆಯೂ ಒಂದು ನಾಟಕವೇ. ಇಂದ್ರ ಮನಸ್ಸಿನ ಅಭಿಮಾನಿ ದೇವತೆ. ಅಹಲ್ಯೆಯ ಮನಸ್ಸನ್ನು ಚಂಚಲಗೊಳಿಸಿದವನೂ ಅವನೆ. ಋಷಿಗಳ ಮನದಲ್ಲಿ ಕೋಪ ಬರಿಸಿದವನೂ ಅವನೆ; ಶಾಪ ನುಡಿಸಿದವನೂ ಅವನೆ. ಮುನಿದಂಪತಿಗಳು ಇಂದ್ರನ ಈ ನಾಟಕದ ಪಾತ್ರಧಾರಿಗಳು ಮಾತ್ರ. ಇಂದ್ರನೇ ಸೂತ್ರಧಾರ.

ಸೂತ್ರಧಾರನಾಗಿ ತಾನೇ ಏಕೆ ಶಾಪಕ್ಕೆ ತುತ್ತಾದ? ವಾಸ್ತವ ಬೇರೆಯೆ ಇದೆ. ಇಂದ್ರ ಗೌತಮರಿಂದ ಎಷ್ಟೋ ಎತ್ತರದ ದೇವತೆ. ಸಣ್ಣವರ ಶಾಪ ದೊಡ್ಡವರಿಗೆ ತಟ್ಟದು. ಅವರು ಅದನ್ನು ತಿರಸ್ಕರಿಸಬಲ್ಲರು; ಮೀರಿ ನಿಲ್ಲಬಲ್ಲರು. ಆದರೂ ಇಂದ್ರ ಶಾಪಕ್ಕೆ ಒಳಗಾದವನಂತೆ ನಡೆದುಕೊಂಡ. ಇದೂ ಒಂದು ದೇವತಂತ್ರ.

ಇಂದ್ರ ಸಹಜವಾಗಿ ಶಾಪವನ್ನು ಧಿಕ್ಕರಿಸಬಹುದಿತ್ತು. ಧಿಕ್ಕರಿಸಿದ್ದರೆ ಮುನಿಗಳ ಅಪರಾಧದ ಪ್ರಮಾಣ ನಗಣ್ಯವಾಗಿ ಬಿಡುತ್ತಿತ್ತು. ದೊಡ್ಡವರಿಗೆ ಶಾಪ ಕೊಡಬೇಕು; ಅದನ್ನು ದೊಡ್ಡವರು ಅನುಭವಿಸಬೇಕು; ಅದರಿಂದ ಗೌತಮರ ಪುಣ್ಯ ಕರಗಬೇಕು. ಇದು ಭಗವತ್‌ಸಂಕಲ್ಪ.

ಅದಕ್ಕಾಗಿ ಇಂದ್ರ ಶಾಪವನ್ನು ಸ್ವೀಕರಿಸಿದ; ಆದರೆ ಅದು ತಿರುಗುಬಾಣವಾಗಿ ಗೌತಮರಿಗೇ ತಟ್ಟಿತು. ಅವರು ಗಳಿಸಿದ ಅಪಾರ ಪುಣ್ಯವನ್ನು ಕಳೆದುಕೊಂಡರು. ವಿಧಿ ನಿಯತಿಯನ್ನು ಪಾಲಿಸಿದ್ದರಿಂದ, ಇಂದ್ರ ಶಾಪವನ್ನನುಭವಿಸಿಯೂ ಪುಣ್ಯವಂತನಾದ.

ಪಾಪ - ಪುಣ್ಯಗಳು ನಾವು ತಿಳಿದಷ್ಟು, ಮೇಲುನೋಟಕ್ಕೆ ಕಾಣುವಷ್ಟು ಸರಳವಾಗಿಲ್ಲ. ನಾವು ಪಾಪ ಎಂದು ತಿಳಿದದ್ದು ಪುಣ್ಯವಾಗಿರಬಹುದು; ಪುಣ್ಯ ಎಂದು ತಿಳಿದದ್ದು ಪಾಪವಾಗಿರಬಹುದು.

ಗೌತಮರ ಪುಣ್ಯಕ್ಷಯಕ್ಕಾಗಿ ಇಂದ್ರ ನಿರ್ಬೀಜನಾದ; ನಿರ್ವೀರ್ಯನಾದ. ಮತ್ತೆ ಶಚಿಯ ಗತಿಯೇನು? ಅಪ್ಸರೆಯರ ಪಾಡೇನು? ಅವರೇಕೆ ಈ ಶಾಪದ ಫಲವನ್ನುಣ್ಣಬೇಕು?

ವಿಷಯ ಬೇರೆಯೇ ಇದೆ: ಬೀಜ ಕಳಕೊಂಡರೂ ಇಂದ್ರ ಶಾಶ್ವತನಾಗಿ ನಪುಂಸಕನಾಗಲಿಲ್ಲ. ಅರ್ಜುನ ಅಜ್ಞಾತವಾಸದಲ್ಲಿ ಬೃಹನ್ನಳೆಯಾಗಿರಲಿಲ್ಲವೆ? ಹಾಗೆಯೆ ಅರ್ಜುನನ ಮೂಲ ಸ್ವರೂಪದಲ್ಲು ಇದೊಂದು ಸಣ್ಣ ನಾಟಕ.

ಪಿತೃದೇವತೆಗಳು ಕುರಿಯ ಬೀಜವನ್ನು ಕಿತ್ತು ಇಂದ್ರನಿಗೆ ಕಸಿ ಮಾಡಿದರು. ಇಂದ್ರ ಮತ್ತೆ ಸಬೀಜವಾದ; ಸವೀರ್ಯನಾದ. ಇಂದ್ರ 'ಮೇಷವೃಷಣ'ನಾದ.

ಹಾಗಾದರೆ ಗೌತಮರ ಶಾಪಕ್ಕೆ ಬಲಿಯಾದದ್ದು ಕುರಿ! ಈ ದೇವಗುಹ್ಯಕ್ಕೆ 'ಕುರಿಬಲಿ'ಯೆ ಬೇಕಾಯಿತೆ? ಇಲ್ಲೂ ಒಂದು ವಿಚಿತ್ರ ರಹಸ್ಯ ಉಂಟು.

ಹೋರಿಯ ಬೀಜ ಕೀಳುವುದು ಅಪರಾಧ. ಆದರೆ ಕುರಿಯ ಬೀಜ ಕೀಳುವುದು ಅಂಥ ಅಪರಾಧವಲ್ಲ. ಮಾಂಸಾಹಾರಿಗಳಾದ ಕ್ಷತ್ರಿಯರು ಯಜ್ಞದಲ್ಲಿ ಮಾಂಸವನ್ನು ದೇವತೆಗಳಿಗೆ ಪಿತೃಗಳಿಗೆ ಅರ್ಪಿಸುತ್ತಿದ್ದರು. ಕುರಿಯ ಬೀಜ ಕಿತ್ತ ಪಿತೃಗಳು ತೀರ್ಮಾನಿಸಿದರು: 'ಬೀಜ ಕಿತ್ತ ಕುರಿಯ ಮಾಂಸ ಪಿತೃಯಜ್ಞದಲ್ಲಿ ವಿಶೇಷವಾಗಿ ಅರ್ಪಿತವಾಗಲಿ. ಆ ಪುಣ್ಯ ಕುರಿಗಳಿಗೆ ಸಲ್ಲಲಿ' ಇತ್ತ ಕುರಿಗಳ ಸಂತತಿ ನಿಯಂತ್ರಣವಾಯಿತು. ಅತ್ತ ಅವುಗಳಿಗೆ ಪಿತೃಲೋಕದ ಪುಣ್ಯ ಪ್ರಾಪ್ತಿಯೂ ಆಯಿತು.

ಹೀಗೆ ಕುರಿಗಳ ನಿರ್ಬೀಜತ್ವದಿಂದ ಕುರಿಗಳಿಗೂ ಕಲ್ಯಾಣವಾಯಿತು. ಲೋಕಕ್ಕೂ ಕಲ್ಯಾಣವಾಯಿತು. ದೇವತೆಗಳ ನಡೆ ಹುಡುಗಾಟಕ್ಕಿಂತಲು ವಿಚಿತ್ರವಾಗಿರುತ್ತದೆ. ದೈವೀಲೀಲೆಯನ್ನು ಅರಿಯಲು ಹುಡುಗಾಟ ಸಲ್ಲದು; 'ಹುಡುಕಾಟ'ಬೇಕು. ಹುಡುಕಿದಾಗ ಹುದುಗಿಸಿದ್ದು ಸಿಗಬಹುದು; ಸಿಗದೆಯೂ ಇರಬಹುದು. ನಮ್ಮ ಈ ಲೋಕದ ಮಾನದಂಡದಿಂದ ದೇವತೆಗಳನ್ನು ಅಳೆಯಬಾರದು ಎಂಬ ಎಚ್ಚರ ಮುಖ್ಯ.

ಇತ್ತ ಅಹಲ್ಯೆ ಅದೃಶ್ಯಳಾಗಿ ತಪಸ್ಸಿಗೆ ಕೂತಿದ್ದಾಳೆ. ತಪಸ್ಸಿನಿಂದ ಅವಳ ಮೈ-ಮನಗಳು ಪರಿಶುದ್ಧವಾಗಿವೆ. ಅವಳು ಜಾರಿದ್ದಕ್ಕಿಂತ ಹೆಚ್ಚು ಏರಿದ್ದಾಳೆ. ಆಗ ವಿಶ್ವಾಮಿತ್ರರ ಜತೆ ರಾಮ



ಅತ್ತ ಬಂದ. ರಾಮನ ಪಾದಸ್ಪರ್ಶವಾದದ್ದೆ ತಡ, ಅಹಲ್ಯೆ ಮೈದಾಳಿ ಬಂದಳು. ಋಷಿಪತ್ನಿ ಎಂಬ ಗೌರವದಿಂದ ರಾಮಚಂದ್ರ ಅವಳ ಕಾಲಿಗೆರಗಿದ. ತನಗೆ ಮರಳಿ ಬದುಕು ಕೊಟ್ಟ ಮಹಾತ್ಮ ಎಂದು ಅಹಲ್ಯೆ ಅವನ ಕಾಲಿಗೆರಗಿದಳು. ಇದೊಂದು ಹೃದಯಸ್ಪರ್ಶಿ ಘಟನೆ.

ಹೆಂಡತಿಯನ್ನು ತುಂಬ ಪ್ರೀತಿಸುತ್ತಿದ್ದ ಗೌತಮರು ಈ ಪುಣ್ಯಕ್ಷಣಕ್ಕಾಗಿಯೆ ಕಾಯುತ್ತಿದ್ದರು. ಅವರ ತಪೋದೃಷ್ಟಿಗೆ ಈ ಸಂಗತಿ ಗೋಚರವಾಯಿತು. ಅವರೂ ಅತ್ತ ಬಂದರು. ಈ ಹಳೆಯ ದಂಪತಿಗಳನ್ನು ಮರಳಿ ಒಟ್ಟುಗೂಡಿಸಿದ ರಾಮಚಂದ್ರ ತಾನೂ ಸಂಸಾರಿಯಾಗಲು ಮಿಥಿಲೆಯತ್ತ ತೆರಳಿದ.

ಬದುಕಿನ ಅನೇಕ ಒಳಪದರುಗಳನ್ನು ತೆರೆದು ತೋರುವ ಈ ಕಥೆ ಮನಃಶಾಸ್ತ್ರೀಯವಾಗಿ ತುಂಬ ಮಹತ್ತ್ವದ್ದು. ರಾಮಚಂದ್ರನ ಅವತಾರದ ಬಿತ್ತರಕ್ಕೆ ತನ್ನನ್ನು ಅರ್ಪಿಸಿಕೊಂಡ ಅಹಲ್ಯೆ ಮಹಾಮಹಿಳೆ. 'ತಪ್ಪು ಮಾಡುವುದು ತಪ್ಪಲ್ಲ. ದೌರ್ಬಲ್ಯ ಮನುಷ್ಯ ಸಹಜ. ತಪ್ಪನ್ನು ತಿದ್ದಿಕೊಳ್ಳದೆ ಇರುವುದು ತಪ್ಪು' - ಎಂಬ ಪಾಠವನ್ನು ಜಗತ್ತಿಗೆ ಸಾರಿದ ಆದರ್ಶ ಮಹಿಳೆ. ಅವಳು ಪ್ರಾತಃಸ್ಮರಣೀಯಳಷ್ಟೆ ಅಲ್ಲ; ಸದಾ ಸ್ಮರಣೀಯಳು.

ಈ ಋಷಿದಂಪತಿಗಳ ಹೆಸರೇ ಒಂದು ಸಂಕೇತದಂತಿದೆ. ಋಷಿಗಳ ಹೆಸರು ಗೌತಮ ಅಥವಾ ಗೋತಮ. ಋಷಿಕೆಯ ಹೆಸರು ಅಹಲ್ಯೆ. ಗೌತಮ, ಗೋತಮ ಎಂದರೆ ಗೋವುಗಳನ್ನು ತಣಿಸಿ ಮಣಿಸಬಲ್ಲವ; ಕೃಷಿಕ. ಅಹಲ್ಯೆ ಎಂದರೆ ನೇಗಿಲು ತಾಗದ ಬಂಜರು ನೆಲ. ಈ ಬಂಜರು ನೆಲವೂ ಒಳ್ಳೆಯ ಕೃಷಿಕನ ಕೈಯಲ್ಲಿ ಸಿಕ್ಕರೆ ಒಳ್ಳೆಯ ಫಸಲು ನೀಡಬಲ್ಲುದು. ಆಗ ದೊರಕುವ ಫಲವೇ ಶತಾನಂದ. ಮಣ್ಣು ಚಿನ್ನದ ಹೂಬಿಡ ತೊಡಗಿದಾಗ ಬಾಳೆಂದರೆ ನೂರಾರು ಸಂತಸಗಳ ನೆಲೆ. ಬಾಳೆಲ್ಲ ಆನಂದಮಯ.

ಈ ನೆಲವೆಣ್ಣಿನ ತಳಿರ ಸಿಂಗಾರವನ್ನು ಕಂಡು ಮುಗಿಲಿಗೂ ಬಾಯಲ್ಲಿ ನೀರೂರಿತು. ಅದು ಹುಚ್ಚೆದ್ದು ಮಳೆ ಸುರಿಸಿತು. ಮೊದಲ ಮಳೆ ಕಾಣದೆ ಬಂಜರಾಗಿದ್ದ ನೆಲದ ಬೆಳೆಯೆಲ್ಲ ಈಗ ಮಳೆಯಿಂದ ಕೊಚ್ಚಿ ಹೋಯಿತು. ನೆಲವೆಲ್ಲ ಕೆಸರು ತುಂಬಿ ಕೊಚ್ಚೆಯಾಯಿತು. ಬೆಳೆಸಿದ ಬೆಳೆ ಕೈತಪ್ಪಿದಾಗ ನೊಂದ ಕೃಷಿಕ 'ಹಾಳಾಗಿಹೋಗು' ಎನ್ನುತ್ತ ತಾನು ಪ್ರೀತಿಸಿದ ನೆಲದಿಂದ ದೂರ ಸರಿದ. ಮತ್ತೆ ಮಳೆಯೂ ಕೈಕೊಟ್ಟಿತು.

ಕೃಷಿಕನ ನೀರಾವರಿಯೂ ಇಲ್ಲದೆ, ಮುಗಿಲ ಮಳೆಯೂ ಇಲ್ಲದೆ ನೆಲ ಮತ್ತೆ ಬರಡಾಯಿತು; ಬರಡುಕಲ್ಲಾಯಿತು.

ಕೊನೆಗೊಮ್ಮೆ ದೈವ ಕಣ್ಣು ತೆರೆಯಿತು. ಗುರುಕರುಣೆ ಪಕ್ಕದಲ್ಲೆ ನದಿಯಾಗಿ ಹರಿದು ನೆಲವನ್ನು ತಣಿಸಿತು. ಕಲ್ಲು ಕೊನರಿತು. ಬರಡು ನೆಲ ಹೊಸ ಹೆಣ್ಣಿನಂತೆ ಮೈತುಂಬಿ ನಿಂತಿತು. ನೆಲಕ್ಕೂ ಸಂಭ್ರಮ; ಕೃಷಿಕನಿಗೂ ಸಂಭ್ರಮ. ಮತ್ತೆ ಕೃಷಿಕ ಮರಳಿದ. ಈ ಫಲವತ್ತಾದ ನೆಲವೆಣ್ಣಿನೊಡನೆ ಸಂಸಾರ ಹೂಡಿದ.

ವಾಲ್ಮೀಕಿಗಳ ಮನದಲ್ಲಿ ಈ ರೂಪಕದ ಕಲ್ಪನೆ ಇತ್ತೋ ಇಲ್ಲವೋ ತಿಳಿಯದು. ಬರಿಯ

ಆಕಸ್ಮಿಕ ಇದ್ದರೂ ಇರಬಹುದು. ಆದರೂ ಈ ವಿಚಿತ್ರಹೆಸರುಗಳು ನಮ್ಮನ್ನು ಇನ್ನೊಂದು ದಿಸೆಯಲ್ಲಿ ಚಿಂತನೆಗೆ ಹಚ್ಚುವುದಂತು ನಿಜ.

## ಹಣ್ಣೆಟ್ಟು ಕಾದ ಹಣ್ಣುಹಣ್ಣು ಮುದುಕಿ

ಯಾರುಂಟು ಶಬರಿಯಂತೆ ದೇವರಿಗಾಗಿ ಕಾದವರು? ದೇವರನ್ನು ತನ್ನತ್ತ ಬರಿಸಿಕೊಂಡವರು? ಶಬರಿಗೆ ಸಾಟಿ ಶಬರಿ ಮಾತ್ರ.

ಕಾಡಿನಲ್ಲಿ ಹುಟ್ಟಿ ಬೆಳೆದ ಅನಾಗರಿಕ ಹೆಣ್ಣು. ಕಾಡುಮಿಕಗಳನ್ನು ಬೇಟೆಯಾಡಿ ಬದುಕುವ ಬೇಡರ ಗುಡಿಸಲ ಪರಿಸರದಲ್ಲಿ ಬಾಳು ಕಂಡ ಹೆಣ್ಣು; ಏನೂ ಓದದ ಅಶಿಕ್ಷಿತ ಹೆಣ್ಣು; ಭಗವತ್ ಪ್ರಜ್ಞೆಯಲ್ಲಿ ಮೇಲ್ವರ್ಗದವರನ್ನೂ ಮೀರಿಸಿದ ಹೆಣ್ಣು; ಕಾಡಿನಲ್ಲಿ ಋಷಿಮುನಿಗಳ ಚಾಕರಿ ಮಾಡುತ್ತಾ ಬೆಳೆದ ಹೆಣ್ಣು; ಬೆಳೆಯುತ್ತ ದೇವರ ಹುಚ್ಚು ಹತ್ತಿಸಿಕೊಂಡ ಹೆಣ್ಣು; ದೇವರಿಗಾಗಿ ಕಾದು ಹಣ್ಣಾದ ಹೆಣ್ಣು; ದೇವರನ್ನು ಹುಡುಕುವ ಬದಲು ದೇವರೇ ಹುಡುಕಿಕೊಂಡು ಬಂದ ಹೆಣ್ಣು; ಮಣ್ಣಿನ ಮಗಳಾಗಿ ಬದುಕಿ, ಕೊನೆಯಲ್ಲಿ ಯೋಗಶಕ್ತಿಯ ಬೆಂಕಿಯಲ್ಲಿ ಬೆಳಕಿನ ಪುಂಜವಾದ ಹೆಣ್ಣು; ಹೆಣ್ಣು ಜಾತಿಗೇ ಮಾದರಿಯಾದ ಹೆಣ್ಣು; ಇದು ಶಬರಿ.

ಶಬರಿ ಎಂದರೆ ಭಗವದನುಭೂತಿಯಿಂದ ಆನಂದವನ್ನು ಭರಿಸಿದವಳು; ಆನಂದವನ್ನು ವರಿಸಿದವಳು. ಬರಿಯ ಆನಂದ.

ಸದಾ ಒಳಗಣ್ಣಿನಿಂದ ಕಾಣುತ್ತಿರುವವಳು; ಹೊರಗಣ್ಣಿನಿಂದಲೂ ಕಾಣಬೇಕೆಂದು ಬಯಸಿ ಕಾಯುತ್ತಿರುವವಳು.

ಶಿಷ್ಯರ ಜತೆಗೆ ಮತಂಗ ಮುನಿಗಳು ನೆಲಸಿದ್ದ ತಾಣ ಮತಂಗವನ; ಮತಂಗಾಶ್ರಮ. ಅಲ್ಲೆ ಶಬರಿಯ ಗುರುಕುಲವಾಸ. ಮುನಿಗಳ ಸೇವೆಯೆ ಅವಳ ಶಾಸ್ತ್ರಾಧ್ಯಯನ. ಅವಳ ಪ್ರಪಂಚವೆಂದರೆ ಅಷ್ಟೆ. ಅದರಾಚೆಗೆ ಹೋದವಳಲ್ಲ; ಅದರಾಚೆಗಿನ ಪ್ರಪಂಚವನ್ನು ಕಂಡವಳಲ್ಲ. ನಾಗರಿಕಪಂಡಿತರ ಭಾಷೆಯಲ್ಲಿ ಅವಳು ಮತಂಗಾಶ್ರಮದ ಕೂಪಮಂಡೂಕ.

ಅವಳು ಅನನ್ಯಭಕ್ತಿಯಿಂದ ಮುನಿಗಳ ಚಾಕರಿ ಮಾಡಿದಳು. ಆಶ್ರಮದ ಪರಿಸರದಲ್ಲಿ ಓಡಾಡುವ ಮೃಗ - ಪಕ್ಷಿಗಳಷ್ಟೆ ಅವಳ ಸಂಗಾತಿಗಳು.

ಜಿಂಕೆಗಳು ಅವಳಿಗೆ ನಡೆ ಕಲಿಸಿದವು; ಹಕ್ಕಿಗಳು ಅವಳಿಗೆ ಮಾತು ಕಲಿಸಿದವು; ಮರಗಳು ಅವಳಿಗೆ ಮೌನ ಕಲಿಸಿದವು; ಋಷಿಗಳು ಅವಳಿಗೆ ಧ್ಯಾನ ಕಲಿಸಿದರು.

ಪಂಪಾಸರಸಿಯ ತಿಳಿನೀರು ಅವಳ ಒಳಹೊರಗನ್ನು ನಿರ್ಮಲಗೊಳಿಸಿತು. ಋಷಿಗಳ ಚಾಕರಿಯಿಂದ ಅವಳು ಅಪರಂಜಿ ಚಿನ್ನವಾದಳು.

ಗೀತೆಯಲ್ಲಿ ಕೃಷ್ಣ ಹೇಳುತ್ತಾನೆ : ಯೋಗದ ದಾರಿಯಲ್ಲಿ ಸಾಗಿದವರು ಯೋಗಿಗಳ ಒಡನಾಟದಲ್ಲೆ ಮರಳಿ ಹುಟ್ಟುತ್ತಾರೆ. ಹಿಂದಿನ ಜನ್ಮದ ಸಂಸ್ಕಾರ ಅವರನ್ನು ಯೋಗದ ಕಡೆಗೇ ಸೆಳೆಯುತ್ತದೆ. ಅವರು ಆ ದಾರಿಯಲ್ಲೆ ಮುಂದುವರಿಯುತ್ತಾರೆ; ಮುಂದುವರಿದು ಬೆಳೆಯುತ್ತಾರೆ;



ಬೆಳೆದು ನನ್ನತ್ತ ಸಾಗುತ್ತಾರೆ; ಸಾಗಿ ನನ್ನನ್ನೆ ಸೇರುತ್ತಾರೆ.

ಇದಕ್ಕೆ ಒಂದು ಶ್ರೇಷ್ಠ ನಿದರ್ಶನ ಶಬರಿ.

ಸಾಮಾನ್ಯವಾಗಿ ಪಂಡಿತರು ದೇವರಿಂದ ದೂರವೆ ಇರುತ್ತಾರೆ. ಏಕೆಂದರೆ ತಾವು ತುಂಬ ತಿಳಿದವರು ಎಂಬ ಜಂಬ ಅವರ ತಲೆಯಲ್ಲಿ ತುಂಬಿರುತ್ತದೆ. ಹಾಗಾಗಿ ದೇವರು ಅಂಥವರ ಹತ್ತಿರ ಸುಳಿಯೋದೇ ಇಲ್ಲ. 'ದೇವರೇ ನನ್ನ ಬಳಿ ಬರಬೇಕು; ನನ್ನಂಥ ಗಜಪಂಡಿತ ದೇವರ ಹತ್ತಿರ ಹೋಗೋದೆಂದರೇನು?' ಎಂದು ಕೊಳ್ಳುತ್ತ ಅವರೂ ದೇವರ ಹತ್ತಿರ ಸುಳಿಯೋದಿಲ್ಲ.

ಏನಿದ್ದರೂ ಹೊರಪೌಳಿಯ ಸುತ್ತ ಅವರ ಹಾರಾಟ. ಗರ್ಭಗುಡಿಗೆ ಪ್ರವೇಶವಿಲ್ಲ!

ಶಬರಿ ಇದಕ್ಕೆ ಅಪವಾದವಾದಳು. ಅವಳಿಗೆ 'ತಾನು ತಿಳಿದವಳು' ಎಂಬ ಜಂಬವಿರಲಿಲ್ಲ. 'ತನಗೆ ಗೊತ್ತಿಲ್ಲ' ಎನ್ನುವುದು ಅವಳಿಗೆ ಗೊತ್ತಿತ್ತು. ಅವಳು ವಿನಯದ ಮುದ್ದೆಯಾದಳು. ಆಗ ದೇವರೇ ಅವಳನ್ನು ಅರಸಿಕೊಂಡು ಬಂದ. ಅವಳಿತ್ತ ಕಾಡು ಹಣ್ಣುಗಳನ್ನು ತಿಂದ.

ಅವಳು ದಂಟೆ ಹಿಡಿದು ಕುಂಟುತ್ತ ಕಾಡು ತುಂಬ ಅಲೆದಳು. ದೇವರಿಗಾಗಿ ಅಲ್ಲ; ಹಣ್ಣಿಗಾಗಿ. ಅವಳಿಗೆ ಗೊತ್ತು : ತನ್ನ ಹೃದಯದಲ್ಲಿ ನೆಲೆ ನಿಂತ ಭಗವಂತ ಒಂದು ದಿನ ತನ್ನ ಬಳಿ ಬಂದೇ ಬರುತ್ತಾನೆ. 'ದೇವರು ಬಂದಾಗ ಅವನಿಗೆ ಏನನ್ನಿತ್ತು ಸತ್ಕರಿಸಲಿ' ಎಂಬ ಚಿಂತೆ ಅವಳಿಗೆ! ಅದಕ್ಕಾಗಿ ಕಾಡುಮೇಡು ಅಲೆದಳು. ಹೊಸ ಹಣ್ಣು ಕಂಡಾಗ ಇದು ನನ್ನ ದೇವರಿಗಿರಲಿ ಎಂದು ಜೋಪಾನವಾಗಿ ಕಟ್ಟಿಟ್ಟಳು. ಅವಳ ಹಣ್ಣಿನ ಸವಿ ಸವಿಯಲು ಭಗವಂತ ಅವಳತ್ತ ಬಂದ.

ಕೃಷ್ಣ ಹೇಳಿದ್ದ : 'ಎಲೆ, ಹೂವು, ಹಣ್ಣು, ನೀರು - ಏನಾದರೂ ಸರಿಯೆ. ಭಕ್ತಿಯಲ್ಲಿ ಕೊಟ್ಟದ್ದನ್ನು ನಾನು ಪ್ರೀತಿಯಿಂದ ಸ್ವೀಕರಿಸುತ್ತೇನೆ.' ಕೃಷ್ಣರೂಪದಲ್ಲಿ ಮತ್ತೆ ಹೇಳಿದ್ದನ್ನು ರಾಮ ರೂಪದಲ್ಲಿ ಮೊದಲೆ ಮಾಡಿ ತೋರಿಸಿಬಿಟ್ಟ.

ಉಪನಿಷತ್ತುಗಳು ಹೇಳುತ್ತವೆ : 'ಭಗವಂತನನ್ನು ಪಾಂಡಿತ್ಯದ ಪ್ರವಚನಗಳಿಂದ ಪಡೆಯುವುದು ಸಾಧ್ಯವಿಲ್ಲ. ಬುದ್ಧಿಯ ಜಾಣತನದಿಂದ ಸಾಧ್ಯವಿಲ್ಲ; ಶಾಸ್ತ್ರಗಳ ನಿರಂತರ ಶ್ರವಣದಿಂದ ಸಾಧ್ಯವಿಲ್ಲ. ಯಾರ ಮೇಲೆ ಭಗವಂತನ ಕರುಣೆ ಹರಿಯುತ್ತದೆ ಅಂಥವರಿಗೆ ಮಾತ್ರ ಅವನು ದೊರಕಿಯಾನು; ಅಂಥವರ ಮುಂದೆ ಮಾತ್ರ ಅವನು ತನ್ನನ್ನು ತೆರೆದುಕೊಂಡಾನು'.

ಶಬರಿಯ ಮುಂದೆ ಭಗವಂತ ತೆರೆದುಕೊಂಡ. ಏಕೆಂದರೆ ಅವಳು ಭಕ್ತಿಯ ಭಂಡಾರವೆ ಆಗಿದ್ದಳು; ತನ್ನನ್ನೆ ಭಗವಂತನಿಗೆ ಅರ್ಪಿಸಿಕೊಂಡವಳಾಗಿದ್ದಳು.

ಇನ್ನೊಂದು ಉಪನಿಷತ್ತು ಹೇಳುತ್ತದೆ: 'ಯಾರು ಭಗವಂತನನ್ನು ತುಂಬು ಭಕ್ತಿಯಿಂದ ಆರಾಧಿಸುತ್ತಾರೆ, ಜತೆಗೆ ಗುರುವನ್ನು ಕೂಡ, ಅಂಥವರಿಗೆ ದೊರಕದ್ದು ಏನೂ ಇಲ್ಲ. ಅವರ ಮುಂದೆ ಸತ್ಯ ತನ್ನ ತಾನೆ ತೆರೆದುಕೊಳ್ಳುತ್ತದೆ'.

ಇದಕ್ಕೆ ಶಬರಿಗಿಂತ ಮಿಗಿಲಾದ ನಿದರ್ಶನ ಬೇಕೆ?

ಅವಳು ಗುರುಸೇವೆಗಾಗಿ ತನ್ನ ಬದುಕನ್ನೆ ಮುಡಿಪಾಗಿಟ್ಟಳು. ಮತಂಗ ಮುನಿಗಳ ಆಶ್ರಮವೆ

ಅವಳ ಸರ್ವಸ್ವವಾಯಿತು. ಒಮ್ಮೆ ಬೇಡರ ಹಳ್ಳಿಯಿಂದ ಬಂದವಳು ಮತ್ತೆ ಅತ್ತ ಮೋರೆ ತಿರುಗಿಸಲಿಲ್ಲ.

ಮೋಡ ಜಡಿದಂತೆ ಹೆಮ್ಮರಗಳಿಂದ ಕತ್ತಲು ಕವಿದ, ಮೃಗ - ಪಕ್ಷಿಗಳು ನಿರ್ಭಯವಾಗಿ ಓಡಾಡುವ ಮುದ್ದಾದ ತಾಣ ಮತಂಗವನ. ಅಲ್ಲಿವಾಸವಾಗಿದ್ದ ಮುನಿಗಳೆಲ್ಲ ಪುಣ್ಯಲೋಕಕ್ಕೆ ತೆರಳಿದರು. ತೆರಳುವಾಗ ಮುನಿಗಳು ಆದೇಶಿಸಿದ್ದರು : 'ರಾಮಚಂದ್ರನಿಗಾಗಿ ಕಾಯುತ್ತಿರು. ಅವನು ಬಂದಾಗ ಆತಿಥ್ಯ ನೀಡಿ ಸತ್ಕರಿಸು. ಅನಂತರವೆ ನಿನ್ನ ಪಯಣ'.

ಗುರುಗಳ ಆಜ್ಞೆ. ಆ ದಟ್ಟ ಕಾಡಿನಲ್ಲಿ ಒಂಟಿಯಾಗಿ ಬದುಕಿದಳು ಶಬರಿ; ಭಗವಂತನನ್ನು ಕಾಯುತ್ತ. ಅವಳು ಕಾದದ್ದು ವ್ಯರ್ಥವಾಗಲಿಲ್ಲ. ಭಗವಂತ ಅವಳನ್ನು ಹುಡುಕುತ್ತ ಬಂದ. ಅವಳಿತ್ತ ಒಣಹಣ್ಣುಗಳನ್ನು ತಿಂದ. ಅವಳಿಗೂ ಅನಂತಫಲವನ್ನಿತ್ತ.

ವಾಲ್ಮೀಕಿ ಮಹರ್ಷಿಗಳೂ ಪೂರ್ವಜೀವನದಲ್ಲಿ ಬೇಟೆಗಾರರಾಗಿದ್ದರು ಎಂಬ ಐತಿಹ್ಯ ಉಂಟಲ್ಲ? ಅದು ಹೌದಾದರೆ, ಅವರು ಶಬರಿಯನ್ನು ಅನನ್ಯವಾಗಿ ಚಿತ್ರಿಸಿದ್ದು ಅರ್ಥಪೂರ್ಣ.

ಶಬರಿ ರಾಮಾಯಣದಲ್ಲಿ ಮರೆಯಲಾಗದ ಪಾತ್ರವಾಗಿ ನಿಂತು ಬಿಡುತ್ತಾಳೆ. ಮತಂಗಾಶ್ರಮದ ಮುನಿಗಳನ್ನಾದರೂ ಮರೆಯಬಹುದು. ಆದರೆ ಶಬರಿಯನ್ನು ಮರೆಯುವುದು ಸಾಧ್ಯವಿಲ್ಲ.

## ಶಿವನಾಗಬಯಸಿ ಶವವಾದ ಶಂಬೂಕ

ಅನೇಕ ಮಂದಿ ಬುದ್ಧಿಜೀವಿಗಳಿಗೆ ವಾಲ್ಮೀಕಿಮುನಿಗಳ ಮೇಲೆ ಕೋಪ. ಅವರ ಆಕ್ಷೇಪ ಇದು : ಶೂದ್ರ ತಪಸ್ವಿಯನ್ನು ಕೊಂದು ಬ್ರಾಹ್ಮಣ ಕುಮಾರನನ್ನು ಬದುಕಿಸಿದ ಕಥೆ ವಾಲ್ಮೀಕಿಗಳ ಜಾತಿಪಕ್ಷಪಾತವನ್ನು ಎತ್ತಿತೋರಿಸುತ್ತದೆ. ಇದು ಖಂಡನಾರ್ಹ.

ಕೆಲವರು ಉತ್ತರಿಸುತ್ತಾರೆ : ವಾಲ್ಮೀಕಿ ಮುನಿಗಳು ನಡೆದದ್ದನ್ನು ಕಾವ್ಯದಲ್ಲಿ ದಾಖಲಿಸಿದರು. ಅದರಲ್ಲಿ ಪಾಪ, ಅವರ ತಪ್ಪೇನು?

ವಿಚಾರವಾದಿಗಳು ಈಗ ಇನ್ನಷ್ಟು ನೆಟ್ಟಗಾಗುತ್ತಾರೆ : ಹಾಗಾದರೆ ಇದು ರಾಮನದ್ದೇ ತಪ್ಪು. ಇಂಥ ಜಾತಿವಾದಿಯನ್ನು ನಾಯಕನನ್ನಾಗಿ ಮಾಡಿ ಕಾವ್ಯ ರಚಿಸಿದ್ದು ವಾಲ್ಮೀಕಿಗಳದೂ ತಪ್ಪು.

ಈ ಪ್ರಹಾರವನ್ನು ತಪ್ಪಿಸಿಕೊಳ್ಳಲು ಕೆಲವರು ವಾಲ್ಮೀಕಿಪ್ರಿಯರು ಹೇಳುತ್ತಾರೆ: ಈ ಕಥೆಯೆ ಪ್ರಕ್ಷಿಪ್ತ. ವಾಲ್ಮೀಕಿ ಮುನಿಗಳ ರಚನೆಯಲ್ಲ, ಯಾರೋ ಮತ್ತಿನ ಬ್ರಾಹ್ಮಣರ ಕೈವಾಡ!

ಒಟ್ಟಿನಲ್ಲಿ ಈ ಕಥೆ ಬುದ್ಧಿಜೀವಿಗಳ ಹೆಗಲೇರಿ ಕುಳಿತು ತಲೆ ತಿನ್ನುತ್ತಲೇ ಇದೆ. ವಾಲ್ಮೀಕಿ ಮುನಿಗಳನ್ನು ಮೆಚ್ಚಲೂ ಆರರು; ಬಿಡಲೂ ಆರರು; ಹಾಗಾಗಿ ಅವರು ಚಡಪಡಿಸುತ್ತಾರೆ : ಒಟ್ಟಿನಲ್ಲಿ ಕವಿ ಈ ಕಥೆಯನ್ನು ಕಾವ್ಯದಲ್ಲಿ ತೂರಿ ದೊಡ್ಡ ತಪ್ಪು ಮಾಡಿದರು. ತಾನೂ ಕಳಂಕ ಹಚ್ಚಿಕೊಂಡರು; ರಾಮನ ಚಾರಿತ್ರ್ಯಕ್ಕೂ ಕಳಂಕ ಹಚ್ಚಿದರು. ಅದರಿಂದ ಇದನ್ನು ಕೈಬಿಡುವುದೇ ಮೇಲು.



ಇಲ್ಲಿ ಇಂಥ ಚಿಂತಕರಲ್ಲಿ ಒಂದು ಮೂಲಭೂತವಾದ ತಪ್ಪಿದೆ. ಇಂಥವರು ತಮ್ಮ ನಂಬಿಕೆಯನ್ನು ಸಾರ್ವಕಾಲಿಕ ಸತ್ಯ ಎಂದು ನಂಬಿಕೊಂಡಿರುತ್ತಾರೆ. ಅವರ ಎಲ್ಲ ನಿರ್ಧಾರಗಳೂ ಈ ಭ್ರಮೆಯ ಸಂತಾನ.

ನಾವು ಒಂದು ಕೃತಿಯನ್ನು ಆಸ್ವಾದಿಸಬೇಕಾದರೆ ಆ ಕಾಲದ, ಆ ಕವಿಯ ನಂಬಿಕೆಯನ್ನು ನಮ್ಮಲ್ಲಿ ಆವಾಹಿಸಿಕೊಳ್ಳಬೇಕು - ಹೊರತು ನಮ್ಮ ನಂಬಿಕೆಯನ್ನು ಕವಿಯ ಮೇಲೆ ಹೇರುವುದಿಲ್ಲ.

ಇಲ್ಲವಾದರೆ ಹರಿಹರನ ರಗಳೆಯನ್ನು ವೈಷ್ಣವರು ಆಸ್ವಾದಿಸುವುದು ಸಾಧ್ಯವಿಲ್ಲ; ಕುಮಾರವ್ಯಾಸ ಭಾರತವನ್ನೋ ಜೈಮಿನಿ ಭಾರತವನ್ನೋ ಶೈವರು ಆಸ್ವಾದಿಸುವುದು ಸಾಧ್ಯವಿಲ್ಲ. ಪಂಪ - ರನ್ನಾದಿಗಳ ಕಾವ್ಯವನ್ನು ಜೈನೇತರರು ಆಸ್ವಾದಿಸುವುದು ಸಾಧ್ಯವಿಲ್ಲ.

ಅಷ್ಟೆಲ್ಲ ಯಾಕೆ? ವಾಲ್ಮೀಕಿರಾಮಾಯಣವನ್ನೆ ಕಟ್ಟಾಶೈವರು ಆಸ್ವಾದಿಸುವುದು ಸಾಧ್ಯವಿಲ್ಲ. ಭಗವದ್‌ಗೀತೆಗೆ ಶೈವರು ಬಹಿಷ್ಕಾರ ಹಾಕಬೇಕಾದೀತು.

ಹಿಂದೆ ಎಂದೂ ಹಾಗೆ ನಡೆಯಲಿಲ್ಲ. ಹಿಂದಿನ ವಿದ್ವಾಂಸರಿಗೆ ತಮ್ಮ ನಂಬಿಕೆಯ ಜತೆಗೆ ಕವಿಯ ನಂಬಿಕೆಯನ್ನು ಮೇಳಯಿಸುವ ಸಮನ್ವಯದ ಕಲೆ ತಿಳಿದಿತ್ತು.

ಹಾಗಾದರೆ ಕವಿಯ ನಂಬಿಕೆಯೇನು? ಇದರ ಇನ್ನೆಲೆಯೇನು?

ಈ ಮಾತು ಅರ್ಥವಾಗಬೇಕಾದರೆ ಒಂದು ಮೂಲಭೂತ ಸಂಗತಿಯನ್ನು ನಾವು ನೆನಪಿಡಬೇಕು : ತಪಸ್ಸು ಮಾಡುವುದೇ ಒಂದು ದೊಡ್ಡ ಸಂಗತಿಯಲ್ಲ. ಏಕಾಗಿ ಈ ತಪಸ್ಸು ಎನ್ನುವುದು ಮುಖ್ಯ.

ಲೋಕಹಿತಕ್ಕಾಗಿ ತಪಸ್ಸು ಮಾಡಬಹುದು; ಅದು ಸಾತ್ವಿಕತಪಸ್ಸು. ಸ್ವಹಿತಕ್ಕಾಗಿಯೂ ಮಾಡಬಹುದು; ಅದು ರಾಜಸ ತಪಸ್ಸು, ಲೋಕನಾಶಕ್ಕಾಗಿಯೂ ಮಾಡಬಹುದು; ಅದು ತಾಮಸ ತಪಸ್ಸು.

ಋಷಿಗಳೂ ತಪಸ್ಸು ಮಾಡಿದ್ದಾರೆ, ರಾವಣ - ಹಿರಣ್ಯಕಶಿಪುವಿನಂಥವರೂ ತಪಸ್ಸು ಮಾಡಿದ್ದಾರೆ. ಋಷಿಗಳು ಮುಕ್ತಿ ಪಡೆದರು; ರಾವಣನಂಥವರು ದುರ್ಮರಣಕ್ಕೀಡಾದರು. ಎರಡೂ ತಪಸಿನ ಫಲವೆ. ಶಾಪ ವರವಾಗಬಹುದು. ವರ ಶಾಪವಾಗಬಹುದು.

ಯಾರು ಮಾಡಿದ್ದು ಎನ್ನುವುದು ಮುಖ್ಯವಲ್ಲ; ಏನು ಮಾಡಿದ್ದು ಎನ್ನುವುದೂ ಮುಖ್ಯವಲ್ಲ. ಏಕೆ ಮಾಡಿದ್ದು ಎನ್ನುವುದು ಮುಖ್ಯ. ಸರಿ - ತಪ್ಪುಗಳ ತೀರ್ಮಾನ ಇರುವುದೇ ಅಲ್ಲಿ.

ಶಂಬೂಕ ಯಾರು ಎಂಬುದನ್ನು ಸದ್ಯಕ್ಕೆ ಮರೆಯೋಣ. ಅವನು ಏಕೆ ತಪಸ್ಸು ಮಾಡಿದ? ಅವನ ಉದ್ದೇಶ ಏನು? ಪ್ರಾಚೀನ ಆಚಾರ್ಯರು ಹೇಳುವಂತೆ, ವಾಲ್ಮೀಕಿ ಮುನಿಗಳು ಸಂಕ್ಷಿಪ್ತವಾಗಿ ಸೂಚಿಸಿದಂತೆ ಅವನ ತಪಸ್ಸಿನ ಉದ್ದೇಶ ಇದು ; ದೇವಲೋಕವನ್ನು ಗೆದೆಯಬೇಕು. ಎಲ್ಲ ದೇವತೆಗಳನ್ನೂ ಮೀರಿ ಮೇಲೇರಬೇಕು. ಇಂದ್ರನಿಗಿಂತಲು ಎತ್ತರಕ್ಕೇರಬೇಕು. ಬರಿಯ ಎತ್ತರವೇನು? ತಾನು ಶಿವನೇ ಆಗಿ ಬಿಡಬೇಕು. ಆಗ ತಾನು ಯಾರನ್ನೂ ಕುರಿತು ತಪಸ್ಸು

ಮಾಡಬೇಕಾಗಿಲ್ಲ. ಎಲ್ಲರೂ ತನ್ನನ್ನು ಕುರಿತು ತಪಸ್ಸು ಮಾಡುತ್ತಾರೆ; ತನ್ನ ಬಳಿಯೆ ವರ ಕೇಳುತ್ತಾರೆ. ಅಂಥ ಎತ್ತರಕ್ಕೆ ತಾನೇರಬೇಕು.

ಇದು ಶಂಬೂಕನ ಬಯಕೆ. ಇಂಥ ತಪಸ್ವಿಯನ್ನೂ ಯಾರಾದರೂ ಮನ್ನಿಸಿದರೆ ಅಂಥವರನ್ನು ಮನೋರೋಗ ತಜ್ಞರ ಬಳಿ ಚಿಕಿತ್ಸೆಗೆ ಕಳಿಸಬೇಕು.

ಗೌತಮರೂ ಎತ್ತರಕ್ಕೇರಬೇಕೆಂದು ತಪಸ್ಸು ಮಾಡಿದರು. ಅದರಲ್ಲಿ ಇನ್ನೊಬ್ಬರ ಸ್ಥಾನವನ್ನು ಕೀಳುವ ಕೀಳು ಬಯಕೆ ಇರಲಿಲ್ಲ. ಅದು ಸಾತ್ವಿಕ ತಪಸ್ಸು. ಆದರೂ ಅವರಿಗೆ ಶಿಕ್ಷೆಯಾಯಿತು. ಇದು ಲೋಕಕಂಟಕವಾದ ಬಯಕೆ. ಇದಕ್ಕೆ ಮಹಾಶಿಕ್ಷೆಯೆ ಆಗಬೇಕು. ಲೋಕ ಕಂಟಕರಿಗೆ ಮರಣ ದಂಡನೆಯೆ ಆಗಬೇಕು.

ರಾವಣನೂ ಸುಮಾರಾಗಿ ಹೀಗೆಯೇ ಬಯಸಿದ್ದ. ಆದರೂ ಅವನು ಶಿವನೇ ತಾನಾಗಬೇಕೆಂದು ಬಯಸಲಿಲ್ಲ. ಶಿವನ ಮೇಲೆ ಅವನಿಗೆ ಗೌರವವಿತ್ತು. ಇವನದು ಇನ್ನೂ ಕೊಳಕು ಮನಸ್ಸಿನ ತಪಸ್ಸು. ರಾವಣನನ್ನು ಕೊಂದ ರಾಮ ಇವನನ್ನು ಕೊಲ್ಲದೆ ಬಿಟ್ಟರೆ ತಪ್ಪು ಮಾಡಿದಂತಾಗುತ್ತಿತ್ತು.

ಇಲ್ಲಿ ಶಂಬೂಕನ ಜಾತಿ ಮುಖ್ಯವಾಗುವುದಿಲ್ಲ. ಅವನ ಉದ್ದೇಶ ಮುಖ್ಯವಾಗುತ್ತದೆ. ಇದಕ್ಕೆ ಇನ್ನೂ ಒಂದು ನಿದರ್ಶನ ಕೊಡಬಹುದು. ರಾವಣ ಬ್ರಾಹ್ಮಣ. ಪುಲಸ್ತ್ಯರ ಮೊಮ್ಮಗ. ಅವನೂ ಋಷಿಕುಮಾರನೆ. ಆದರೆ ರಾಮ ಅವನನ್ನು ಕೊಂದ.

ತಪ್ಪು ಮಾಡಿದಾಗ ಬ್ರಾಹ್ಮಣನೂ ಶಿಕ್ಷಾರ್ಹ. ತಪ್ಪು ಮಾಡದ ಶೂದ್ರನೂ ಶಿಕ್ಷಾರ್ಹನಲ್ಲ. ಇದು ವಾಲ್ಮೀಕಿಯ ನಂಬಿಕೆ; ರಾಮನ ನಂಬಿಕೆ. ಇಲ್ಲಿ ಜಾತಿವಾದವನ್ನು ಎತ್ತುವುದು ಮೂಲದ ಸ್ಫೂರ್ತಿಗೆ ಅಪಚಾರವೆಸಗಿದಂತೆ.

ರಾಮಾಯಣದ ಪ್ರಾರಂಭದಲ್ಲೆ ಇದಕ್ಕೆ ಬೀಜಕ್ಷೇಪವಿದೆ. ಶಬ್ದವೇಧಿ ಕಲೆಯನ್ನು ಬಲ್ಲ ದಶರಥ ದೂರದಲ್ಲಿ ನೀರು ಕುಡಿವ ಸದ್ದು ಬಂದ ಕಡೆಗೆ ಗುರಿಯಿಟ್ಟು ಬಾಣ ಹೊಡೆಯುತ್ತಾನೆ. ಅದು ಆನೆ ನೀರು ಕುಡಿಯುವ ಸದ್ದು ಎಂದು ಅವನು ಭ್ರಮಿಸಿದ್ದ. ಆದರೆ ಬಾಣ ನಾಟಿದ್ದು ಒಬ್ಬ ತರುಣ ತಪಸ್ವಿಗೆ.

ದಶರಥ ಬಳಿ ಬಂದಾಗ ಆ ತಪಸ್ವಿ ತನ್ನ ಬಗ್ಗೆ ಹೀಗೆ ಹೇಳುತ್ತಾನೆ : 'ರಾಜನ್, ನಾನು ಬ್ರಾಹ್ಮಣನಲ್ಲ. ಶೂದ್ರತಪಸ್ವಿ. ನನ್ನ ತಂದೆ ಒಬ್ಬ ವೈಶ್ಯ. ತಾಯಿ ಶೂದ್ರ ಸ್ತ್ರೀ. ನಾನು ಸತ್ತರೆ ಅವರಿಗೆ ಯಾರೂ ಇಲ್ಲ. ಮೊದಲು ಅವರನ್ನು ಸಂತೈಸು'.

ಹೀಗೆ ರಾಮಾಯಣ ಪ್ರಾರಂಭವಾಗುವುದೆ ಶೂದ್ರತಪಸ್ವಿಯ ಶಾಪದಿಂದ. ಶೂದ್ರರು ತಪಸ್ಸು ಮಾಡಬಾರದು ಎನ್ನುವುದು ಆ ಕಾಲದ ನಂಬಿಕೆಯಾಗಿದ್ದರೆ, ದಶರಥ ಆ ಮುನಿ ಕುಮಾರನನ್ನು ಕೊಂದದ್ದಕ್ಕೆ ಸಂತಸ ಪಡಬೇಕಿತ್ತು. ಕ್ಷಮೆ ಕೇಳುವ ಅಗತ್ಯವಿರಲಿಲ್ಲ.

ಅದರಿಂದ ನಾವು ನಿರ್ಧರಿಸಬಹುದು : ಶಂಬೂಕ ಶೂದ್ರನಾಗಿದ್ದು ನಿಜ. ಆದರೆ ರಾಮ ಅವನನ್ನು ಕೊಂದದ್ದು ಶೂದ್ರನೆಂಬ ಕಾರಣಕ್ಕಾಗಿ ಅಲ್ಲ. ಅವನ ಈ ನೀಚ ಬಯಕೆಗಾಗಿ.



ಹಾಗಾದರೆ 'ಶೂದ್ರನ ತಪಸ್ಸಿನಿಂದಾಗಿ ಒಬ್ಬ ಬ್ರಾಹ್ಮಣ ಕುಮಾರ ಸತ್ತ. ಶೂದ್ರ ತಪಸ್ವಿಯ ತಲೆ ತರಿದಾಗ ಬ್ರಾಹ್ಮಣ ಕುಮಾರ ಬದುಕಿದ' ಎಂಬ ಮಾತಿಗೆ ಏನರ್ಥ?

ಇಲ್ಲಿ ಈ ಶಬ್ದ ಜಾತಿವಾಚಕವಾಗುವುದಕ್ಕಿಂತಲು ಹೆಚ್ಚು ಗುಣವಾಚಕವಾಗಿ ಬಂದಿದೆ. ಪ್ರಾಚೀನ ಶಾಸ್ತ್ರಗಳಲ್ಲಿ ಹೆಚ್ಚಿನ ಕಡೆ ಈ ಶಬ್ದವನ್ನು ಗುಣವಾಚಕವಾಗಿಯೆ ಬಳಸಿದ್ದಾರೆ. ಅದರಿಂದಲೆ ರಾವಣ ಜಾತಿಯಿಂದ ಬ್ರಾಹ್ಮಣನಾಗಿದ್ದರೂ ಎಂದೂ ರಾಮಾಯಣದಲ್ಲಿ ಅವನನ್ನು 'ಬ್ರಾಹ್ಮಣ' ಶಬ್ದದಿಂದ ಉಲ್ಲೇಖಿಸಲಾಗಿಲ್ಲ. ಏಕೆಂದರೆ ಅವನಲ್ಲಿ ಬ್ರಾಹ್ಮಣಗುಣ ಇರಲಿಲ್ಲ.

ಏನು ಈ ಪದಗಳ ಶಾಸ್ತ್ರೀಯ ಅರ್ಥ?

ವೇದವನ್ನು ಅರಿತು, ಜ್ಞಾನಿಯಾಗಿ ಅಧ್ಯಾತ್ಮದ ದಾರಿಯಲ್ಲಿ ನಡೆಯುವವನು ಬ್ರಾಹ್ಮಣ. ಅರಿವುಗೆಟ್ಟು ದಾರಿ ತಪ್ಪಿ ದುಃಖಕ್ಕೊಳಗಾದವನು ಶೂದ್ರ. ಇದು ಈ ಪದಗಳ ನಿರ್ವಚನದಿಂದ ಬರುವ ಅರ್ಥ.

ವಾಸ್ತವವಾಗಿ ಶಂಬೂಕ ಶೂದ್ರನೂ ಅಲ್ಲ. ಅವನೊಬ್ಬ ಅಸುರ. ಜಂಭ ಎಂದು ಅವನ ಹೆಸರು. ಹೆಸರಿಗೆ ತಕ್ಕಂತೆ ವಿಪರೀತ ಜಂಭ, ಹಿಂದೆ ಅಸುರರೂಪದಲ್ಲೆ ಪಾರ್ವತಿಯನ್ನು ಕುರಿತು ತಪಸ್ಸು ಮಾಡಿ - ತಾನು ಈ ಕಲ್ಪ ಪೂರ್ತಿ ಸಾಯಬಾರದು ಎಂದು ವರ ಪಡೆದಿದ್ದ. ವರ ಪಡೆದು ಇನ್ನಷ್ಟು ಉನ್ಮತ್ತನಾದ. ಶೂದ್ರಯೋನಿಯಲ್ಲಿ ಭೂಮಿಯಲ್ಲಿ ಜನಿಸಿದ. ಇಲ್ಲಿ ಮತ್ತೆ ಪಾರ್ವತಿಯನ್ನು ಮೀರಿ ತಾನೆ ಶಿವನಾಗಬೇಕು ಎಂದು ಬಯಸಿ ತಪಸ್ಸಿಗಿಳಿದ.

ಇದು ವರಕೊಟ್ಟ ಶಿವನ ತಲೆಗೇ ಕೈ ಇಡಹೊರಟ ಭಸ್ಮಾಸುರನಿಗಿಂತಲೂ ನೀಚವಾದ ಕೆಲಸ. ಇವನು ಮಹಾಧೂರ್ತ; ಸಾಟಿಯಿರದ ಲೋಕಕಂಟಕ. ಇವನನ್ನು ಕೊಲ್ಲದೆ ಇನ್ನಾರನ್ನು ಕೊಲ್ಲಬೇಕು?

ಇವನು ಅಸುರ. ರಾಮಚಂದ್ರ ಅಸುರಾಂತಕ. ಅಸುರಾಂತಕನ ಕೈಯಲ್ಲಿ ಅಸುರ ಸತ್ತ. ಆಗಬೇಕಾದದ್ದೆ ಆಯಿತು. ಜಾತಿಯ ಹಳದಿ ರೋಗ ಹಿಡಿದವರ ಕೈಯಲ್ಲಿ ಈ ಕಥೆ ನರಳಬಾರದು. ಎಲ್ಲವನ್ನೂ ವಾಸ್ತವದ ನೆಲೆಯಲ್ಲಿ ನೋಡಿ ಚಿಂತಿಸಬೇಕು.

ಏನು ಮಾಡೋಣ. ಹೇಳಬೇಕಾದ್ದನ್ನು ಪೂರ್ತಿ ಬಿಚ್ಚಿ ಹೇಳದೆ ಒಮ್ಮೊಮ್ಮೆ ವಾಲ್ಮೀಕಿ ಮಹರ್ಷಿಗಳು ಗೊಂದಲಗೆಡಿಸಿ ಬಿಡುತ್ತಾರೆ. ಅವರು ಅರ್ಥವಾಗಬೇಕಾದರೆ ಅವರ ಮಾತುಗಳನ್ನಷ್ಟೆ ಅಲ್ಲ; ಮಾತುಗಳ ನಡುವಿನ ಮೌನವನ್ನು ಅರ್ಥಮಾಡಿಕೊಳ್ಳಬೇಕು.

ಹೀಗೆ ಗೊಂದಲಗಳ ನಡುವೆ ರಾಮನ ವ್ಯಕ್ತಿತ್ವದ ನಿರ್ಣಯದಲ್ಲಿ ಶಂಬೂಕನೂ ಮಹತ್ತ್ವದ ಪಾತ್ರವನ್ನು ವಹಿಸುತ್ತಾನೆ.

**-ಬನ್ನಂಜೆ ಗೋವಿಂದಾಚಾರ್ಯ**